# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/159/2021-22

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 16.08.2021

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 04.08.2021 ರಂದು ಜರುಗಿದ 159ನೇ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 16.08.2021

******

ದಿನಾಂಕ 04.08.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ 159ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

K. Jyothi 16/8/2021
ಕುಲಸಚಿವರು

## ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/159/ಸಾ.ಸ/2020-21

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 13-08-2021

**ದಿನಾಂಕ 04-08-2021 ರಂದು ಬೆಳಿಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 009, ಇಲ್ಲಿ ಜರುಗಿದ 159ನೇ ಸಿಂಡಿಕೇಟ್ ಸಭೆಯ ನಡವಳಿಗಳು.**

<u>ಹಾಜರಾದ ಸದಸ್ಯರು:</u>

1. ಪ್ರೊ. ವೇಣುಗೋಪಾಲ್ ಕೆ.ಆರ್. ಕುಲಪತಿಗಳು – ಸಭಾಧ್ಯಕ್ಷರು
2. ಡಾ॥ ಎಸ್.ಜಿ. ಅಪ್ಪಾಜಿ ಗೌಡ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪರವಾಗಿ – ಸದಸ್ಯರು
3. ಶ್ರೀ ಶ್ರೀಕಾಂತ್ ಜಿ., ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪರವಾಗಿ – ಸದಸ್ಯರು
4. ಡಾ॥ ಹಸೀನ್ ತಾಜ್ – ಸದಸ್ಯರು
5. ಡಾ॥ ಸುಧಾಕರ ಹೆಚ್ – ಸದಸ್ಯರು
6. ಶ್ರೀ ಎಂ. ಉದಯ ಕುಮಾರ್ – ಸದಸ್ಯರು
7. ಶ್ರೀಮತಿ ಪದ್ಮ ವಿ – ಸದಸ್ಯರು
8. ಶ್ರೀ ಹೆಚ್.ಆರ್. ಕುಮಾರಸ್ವಾಮಿ – ಸದಸ್ಯರು
9. ಶ್ರೀ ಜಯರಾಮ – ಸದಸ್ಯರು
10. ಡಾ॥ ವತ್ಸಲ ಎನ್ – ಸದಸ್ಯರು
11. ಡಾ॥ ಗೋವಿಂದರಾಜು – ಸದಸ್ಯರು
12. ಶ್ರೀ ಗೋಪಿನಾಥ್ – ಸದಸ್ಯರು
13. ಶ್ರೀ ಪ್ರೇಮ್ ಸೋಹನ್ ಲಾಲ್ – ಸದಸ್ಯರು
14. ಪ್ರೊ. ಟಿ.ವಿ. ರಾಜು – ಸದಸ್ಯರು
15. ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ – ಸದಸ್ಯರು
16. ಪ್ರೊ. ಜಯಕುಮಾರ್ ಜಿ. ರೆಡ್ಡಿ – ಸದಸ್ಯರು
17. ಡಾ॥ ರೂಪಶ್ರೀ ಎಸ್. ಕೆ.ಎ.ಎಸ್. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಪರವಾಗಿ – ಸದಸ್ಯರು
18. ಶ್ರೀ ಮಹಮ್ಮದ್ ಜ಼ಿಯಾ ಉಲ್ಲಾಖಾನ್ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರ ಪರವಾಗಿ – ಸದಸ್ಯರು
19. ಪ್ರೊ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
20. ಶ್ರೀಮತಿ ಕೆ. ಜ್ಯೋತಿ, ಭಾ.ಆ.ಸೇ ಕುಲಸಚಿವರು – ಸದಸ್ಯ ಕಾರ್ಯದರ್ಶಿ

ಒಂದು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು, ಸಭಾಧ್ಯಕ್ಷರನ್ನು ಹಾಗೂ ಸದಸ್ಯರನ್ನು ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಕುಲಪತಿಗಳನ್ನು ಕೋರಿದರು.

ಕುಲಪತಿಗಳು, ಸದಸ್ಯರೆಲ್ಲರನ್ನು ಮತ್ತೊಮ್ಮೆ ಸ್ವಾಗತಿಸಿ, ಸದಸ್ಯರುಗಳು ಯಾವುದಾದರೂ ವಿಷಯಗಳಿದ್ದರೆ ಕಾರ್ಯಸೂಚಿ ಮುಗಿದ ಮೇಲೆ ಅಧ್ಯಕ್ಷರ ಅನುಮತಿಗೆ ಒಳಪಟ್ಟು ಚರ್ಚಿಸಬಹುದಾಗಿದೆ ಎಂದು ತಿಳಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

ಈ ಹಂತದಲ್ಲಿ ಸದಸ್ಯರುಗಳು ಮಾತನಾಡಿ ಕೆಲವು ವಿಷಯಗಳನ್ನು ಚರ್ಚಿಸಬೇಕಿದೆ, ನಂತರ ಕಾರ್ಯಸೂಚಿಯನ್ನು ತೆಗೆದುಕೊಳ್ಳಬಹುದೆಂದು ತಿಳಿಸಿ, ಈ ಕೆಳಕಂಡ ವಿಷಯಗಳ ಬಗ್ಗೆ ಪ್ರಸ್ತಾಪಿಸಿದರು.

1. ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಕಳೆದ ಸಿಂಡಿಕೇಟ್ ಸಭೆಯ ನಡಾವಳಿಗಳಲ್ಲಿ ಸದಸ್ಯರು ಪ್ರಸ್ತಾಪಿಸಿದ ವಿಷಯಗಳ ಜೊತೆಗೆ, ಸಂಬಂಧಪಟ್ಟ ಸದಸ್ಯರುಗಳ ಹೆಸರನ್ನು ನಮೂದಿಸಿ ನಡಾವಳಿಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಬೇಕೆಂದು ತಿಳಿಸಿದರು.

   ಚರ್ಚೆಯ ನಂತರ, ದಿನಾಂಕ: 14-07-2021ರಂದು ಜರುಗಿದ ಮುಂದೂಡಲ್ಪಟ್ಟ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ: 48: ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗೆಗಿನ ನಡಾವಳಿಯಲ್ಲಿ ನಮೂದಾಗಿರುವ 'ಡಾ॥ ಟಿ.ಜಿ. ಉಮೇಶ್ ಅವರು ಪ್ರಭಾರ ಅಧ್ಯಕ್ಷರಾಗಿ ನಿರ್ವಹಿಸಿದ ಕಾರ್ಯಾವಧಿಯನ್ನು ಪೂರ್ಣ ಪ್ರಮಾಣದ ಅಧ್ಯಕ್ಷರ ಕಾರ್ಯಾವಧಿ ಎಂದು ಪರಿಗಣಿಸಲು ಸಹ ಸಿಂಡಿಕೇಟ್ ನಿರ್ಣಯಿಸಿತು' ಎಂಬುದರ ಬದಲಾಗಿ *'ಡಾ॥ ಟಿ.ಜಿ. ಉಮೇಶ್ ಅವರು ಈಗಾಗಲೇ ಸತತವಾಗಿ ಎರಡು ವರ್ಷ ಮೂರು ತಿಂಗಳ ಅವಧಿಗೆ ಪ್ರಭಾರ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದು ಮತ್ತೆ ಅವರನ್ನೇ ಪೂರ್ಣ ಪ್ರಮಾಣದ ಅಧ್ಯಕ್ಷರನ್ನಾಗಿ ಮಾಡಿದರೆ ನಾಲ್ಕು ವರ್ಷಗಳ ಅವಧಿಗೆ ವಿಭಾಗದ ಅಧ್ಯಕ್ಷರಾಗುವುದು ವಿಶ್ವವಿದ್ಯಾಲಯದ ಪರಿನಿಯಮಾವಳಿಯ ಉಲ್ಲಂಘನೆಯಾಗುತ್ತದೆ. ಆದಕಾರಣ ಈ ಪ್ರಕರಣವನ್ನು ವಿಶೇಷವಾಗಿ ಪರಿಗಣಿಸಿ ಡಾ॥ ಸಿ. ಮಾಯಾ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ನಿರ್ಣಯಿಸಿತು'* ಎಂದು ಓದಿಕೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

2. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಸಿಂಡಿಕೇಟ್ ಸಭೆಯನ್ನು ಜ್ಞಾನಭಾರತಿಯಲ್ಲಿ ಏರ್ಪಡಿಸಬೇಕೆಂದು ಹಾಗೂ ಸಿಂಡಿಕೇಟ್ ಸಭೆಗಳು ನಿಯಮಬದ್ಧವಾಗಿ ನಡೆಯುತ್ತಿಲ್ಲ. ಸಿಂಡಿಕೇಟ್ ಸದಸ್ಯರು ಪ್ರಸ್ತಾಪಿಸಿದ ವಿಷಯಗಳಿಗೆ ಸ್ಪಷ್ಟ ನಿರ್ಧಾರಗಳನ್ನು ತಿಳಿಸುತ್ತಿಲ್ಲ. ಒಂದೂವರೆ ವರ್ಷಗಳಿಂದ ಪರಿಚಯ ಸಭೆ ನಡೆಸಲು ತಿಳಿಸಿದ್ದಾಗಿಯೂ ಅದು ಕಾರ್ಯರೂಪಕ್ಕೆ ಬಂದಿರುವುದಿಲ್ಲ ಹಾಗೂ ಅವರು ಸಲ್ಲಿಸಿದ್ದ ಪತ್ರಕ್ಕೆ ಉತ್ತರ ಬಂದಿರುವುದಿಲ್ಲ, ಹಿಂದಿನ ಹಣಕಾಸು ಸಮಿತಿಯ ನಡಾವಳಿಗಳನ್ನು ಶೀಘ್ರವಾಗಿ ಹೊರಡಿಸಬೇಕೆಂದು ತಿಳಿಸಿದರು.

3. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಲು ವಿಶ್ವವಿದ್ಯಾಲಯ ಮಟ್ಟದಲ್ಲಿ ಸಮಿತಿ ರಚಿಸಬೇಕು. ಎಪ್ಪತ್ತೈದನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಮಿತಿ ರಚಿಸಬೇಕು. ವಿಶ್ವವಿದ್ಯಾಲಯದ ಸ್ವೀಕೃತಿಯನ್ನು ಎಸ್.ಬಿ.ಐ. ಮೂಲಕ ಪಡೆದುಕೊಳ್ಳುವ ಬಗ್ಗೆ ನಾಲ್ಕು .ತಿಂಗಳ ಹಿಂದೆ ಸಿಂಡಿಕೇಟ್ ಉಪ ಸಮಿತಿ ರಚಿಸಲಾಗಿದ್ದರೂ ಸಮಿತಿಯ ಸಭೆ ನಡೆದಿರುವುದಿಲ್ಲ. ಇನ್‌ಹಾಕ್ ಸಂಸ್ಥೆಯ ಮೂಲಕವೇ ಸ್ವೀಕೃತಿಯನ್ನು ಪಡೆಯಲಾಗುತ್ತಿದೆ. ಸಮಿತಿಯ ಸಭೆ ನಡೆದಿರುವುದಿಲ್ಲ. ನಡಾವಳಿಗಳನ್ನು ಸದಸ್ಯರು ಹೇಳಿದ ಹಾಗೆ ಸಿದ್ದಪಡಿಸಬೇಕು. ಮೂರನೇ ಸಂಸ್ಥೆಯಿಂದ (Third party inspection) ಪರಿಶೀಲಿಸಿ ವರದಿ ಬಂದನಂತರ ಕೆ.ಆರ್.ಡಿ.ಎಲ್. ಸಂಸ್ಥೆಗೆ ಕೆಫೆಟೇರಿಯಾ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿಲ್ ಪಾವತಿ ಮಾಡಬೇಕು. ಹಾಸ್ಟೆಲ್ ಕಟ್ಟಡ ನಿರ್ಮಾಣ ಹಾಗೂ ಯು.ವಿ.ಸಿ.ಇ ಆವರಣದಲ್ಲಿ ಕೆಫೆಟೇರಿಯಾ ಕಟ್ಟಡದ ನಿರ್ಮಾಣದ ಕುರಿತು ಕ್ರಮವಾಗಿ ಕರ್ನಾಟಕ ಹೌಸಿಂಗ್

ಬೋರ್ಡ್ ಮತ್ತು ಕೆ.ಆರ್.ಐ.ಡಿ.ಎಲ್. ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಒಡಂಬಡಿಕೆಗೆ ಸಿಂಡಿಕೇಟ್ ಅನುಮೋದನೆ ಪಡೆಯಬೇಕು. ಈ ಕಟ್ಟಡ ನಿರ್ಮಾಣಗಳ ಪ್ರಗತಿಯನ್ನು ಪರಿಶೀಲಿಸಲು ಮಾನಿಟರಿಂಗ್ ಕಮಿಟಿ ರಚಿಸಿದ್ದು, ಆ ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರನ್ನು ಸೇರಿಸಿರುವುದಿಲ್ಲ. ಜ್ಞಾನಭಾರತಿ ಆವರಣದಲ್ಲಿರುವ ಡಾ॥ ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಿಮಿಕ್ಸ್ ಸಂಸ್ಥೆಯ ಕಟ್ಟಡಕ್ಕೆ ಹೊಂದಿಕೊಂಡಂತೆ, ವಿಶ್ವವಿದ್ಯಾಲಯಕ್ಕೆ ಸೇರಿದ್ದ ಜಾಗದಲ್ಲಿ ದೇವಸ್ಥಾನ ನಿರ್ಮಿಸಿದ್ದು, ಸದರಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

4. ಕುಲಪತಿಗಳು ಉತ್ತರಿಸಿ, ಯು.ವಿ.ಸಿ.ಇ ಆವರಣದಲ್ಲಿ ಕೆಫೆಟೇರಿಯಾ ಕಟ್ಟಡದ ನಿರ್ಮಾಣಕ್ಕೆ ಸಂಬಂದಿಸಿದಂತೆ ರಚಿಸಿರುವ ಮಾನಿಟರಿಂಗ್ ಕಮಿಟಿಗೆ ಸಿಂಡಿಕೇಟ್ ಸದಸ್ಯರೊಬ್ಬರನ್ನು ನಾಮನಿರ್ದೇಶನ ಮಾಡಲಾಗುವುದು. ಹಣಕಾಸು ಸಮಿತಿ ನಡಾವಳಿಯನ್ನು ಸಧ್ಯದಲ್ಲೇ ಹೊರಡಿಸಲಾಗುವುದು. ಮುಂದೂಡಲ್ಪಟ್ಟ 158ನೇ ಸಿಂಡಿಕೇಟ್ ನಡಾವಳಿಯಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರನ್ನು 'ಸದಸ್ಯರು' ಎಂಬುದರ ಬದಲಾಗಿ ಸಂಬಂಧಪಟ್ಟ ಹೆಸರುಗಳನ್ನು ನಮೂದಿಸಿ ತಿದ್ದುಪಡಿಯನ್ನು ತರಲಾಗುವುದು. 75ನೇ ಸ್ವಾತಂತ್ರ್ಯೋತ್ಸವ ಆಚರಣೆಗೆ ಸಂಬಂಧಿಸಿದಂತೆ ಈಗಾಗಲೇ ಡೀನರುಗಳು ಪೂರ್ವಭಾವಿ ಸಭೆ ನಡೆಸಿದ್ದು, ಸದರಿ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗುವುದು. ಸಿಂಡಿಕೇಟ್ ಸಭೆಯ ಸಮಯವನ್ನು ವ್ಯರ್ಥ ಮಾಡುವುದು ಬೇಡ. ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದು ತಿಳಿಸಿದರು.

5. ಈ ಹಂತದಲ್ಲಿ, ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪ್ರವೇಶ ಆಕಾಂಕ್ಷಿ ವಿದ್ಯಾರ್ಥಿಗಳು, ಸಮತಾ ಸೈನಿಕ ದಳದ ಅಧ್ಯಕ್ಷರು ಹಾಗೂ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಇವರುಗಳು ಕೆಳಕಂಡ ವಿಷಯಗಳ ಬಗ್ಗೆ ಸಿಂಡಿಕೇಟ್ ಸಭೆಗೆ ಮನವಿ ಸಲ್ಲಿಸಿ ಅವುಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದ ಮೇರೆಗೆ ಸದರಿ ಬೇಡಿಕೆಗಳ ಬಗ್ಗೆ ನಡೆದ ಚರ್ಚೆ ಹಾಗೂ ನಿರ್ಣಯ ಕೆಳಕಂಡಂತಿದೆ:

   i). 2016 ರಿಂದ ಇಲ್ಲಿಯವರೆಗೂ ಪಿ.ಹೆಚ್.ಡಿ. ಕೋರ್ಸಿಗೆ ಪ್ರವೇಶ ನಡೆಯದಿರುವ ಕಾರಣ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವ ದೃಷ್ಟಿಯಿಂದ, ಪ್ರಸ್ತುತ ಪಿ.ಹೆಚ್.ಡಿ. ಕೌನ್ಸೆಲಿಂಗ್‌ನಲ್ಲಿ ವಿಶ್ವವಿದ್ಯಾಲಯದ ವಿಭಾಗಗಳ ಪಿ.ಹೆಚ್.ಡಿ. ಮಾರ್ಗದರ್ಶಕರಿಗೆ, ಅವರು ಇಚ್ಚೆ ವ್ಯಕ್ತಪಡಿಸಿದಲ್ಲಿ ಹೆಚ್ಚುವರಿಯಾಗಿ ಒಂದು ಸಂಶೋಧನಾ ವಿದ್ಯಾರ್ಥಿಯನ್ನು ತೆಗೆದುಕೊಳ್ಳಲು ಅನುಮತಿಸಲು ಹಾಗೂ ಈ ಹೆಚ್ಚುವರಿ ಪ್ರವೇಶಾತಿಯನ್ನು ಆ ಮಾರ್ಗದರ್ಶಕರ ಅಡಿಯಲ್ಲಿ ಖಾಲಿ ಆಗುವ ಮುಂದಿನ ಪಿ.ಹೆಚ್.ಡಿ. ಸೀಟಿಗೆ ಎದುರಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಸಿಂಡಿಕೇಟ್ ಶಿಫಾರಸ್ಸು ಮಾಡಿತು. ಮುಂದುವರೆದು ಈ ಸಂಬಂಧ ನಡೆದ ಡೀನರು ಮತ್ತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯ ನಡಾವಳಿಯನ್ನು ಹೊರಡಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

   ii). ವಿದ್ಯಾರ್ಥಿಗಳ ಅನುಕೂಲಕ್ಕೋಸ್ಕರ ಖಾಲಿ ಉಳಿದಿರುವ ಪಿ.ಹೆಚ್.ಡಿ. ಸೀಟುಗಳನ್ನು ಬೇರೆ ಪ್ರವರ್ಗಗಳಿಗೆ ವರ್ಗಾಯಿಸುವ ಕುರಿತು ಚರ್ಚೆ ನಡೆದು, ಈಗಾಗಲೇ ನಿಗದಿಪಡಿಸಿರುವ ಪ್ರವರ್ಗಗಳ ಒಳಗೆ ಮಾತ್ರ ಆಂತರಿಕ ವರ್ಗಾವಣೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. ಉದಾ., ಸಹಾಯಕ ಪ್ರಾಧ್ಯಾಪಕರಿಗೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲಾಗುತ್ತಿರುವಂತೆ: ಪ್ರವರ್ಗ –2ಎ, 2ಬಿ, 3ಎ, 3ಬಿ ಗ್ರೂಪ್ ಅಡಿಯಲ್ಲಿ ಪ್ರವರ್ಗ 2ಎ ನಲ್ಲಿ ಖಾಲಿ ಉಳಿದಿದ್ದರೆ ಸದರಿ ಗ್ರೂಪ್‌ನ ಮುಂದಿನ ಪ್ರವರ್ಗಕ್ಕೆ ಅಂದರೆ 2ಬಿ ಗೆ ರೊಟೇಷನ್ ಪದ್ದತಿಯಲ್ಲಿ ವರ್ಗಾಯಿಸಬಹುದಾಗಿದೆ, ಹಾಗೆಯೇ ಸಹಪ್ರಾಧ್ಯಾಪಕರಿಗೆ ಹಂಚಿಕೆ ಮಾಡುತ್ತಿರುವ ಪ್ರವರ್ಗ 2ಬಿ/3ಎ/3ಬಿ ಗ್ರೂಪ್‌ನಲ್ಲಿ, ಪ್ರಾಧ್ಯಾಪಕರಿಗೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲಾಗುವ ಎಸ್.ಟಿ/ಪ್ರವರ್ಗ–1 ಗ್ರೂಪ್‌ನ ಒಂದು

ಪ್ರವರ್ಗದಲ್ಲಿ ಖಾಲಿ ಉಳಿದಿದ್ದರೆ ಸದರಿ ಗ್ರೂಪ್‌ನಲ್ಲಿ ಮುಂದಿನ ಪ್ರವರ್ಗಕ್ಕೆ ವರ್ಗಾಹಿಸಬಹುದಾಗಿದೆ. ಆದರೆ, ಒಂದು ಗ್ರೂಪ್ ನಿಂದ ಮತ್ತೊಂದು ಗ್ರೂಪ್‌ಗೆ ವರ್ಗಾವಣೆ ಸಾಧ್ಯವಿಲ್ಲವೆಂದು ಸಿಂಡಿಕೇಟ್ ಸ್ಪಷ್ಟಪಡಿಸಿತು.

iii). Guide Willingness ಪ್ರಕಾರ ಪಿ.ಹೆಚ್.ಡಿ. ಸೀಟುಗಳನ್ನು ಹಂಚಿಕೆ ಮಾಡುವ ಕುರಿತು ವಿದ್ಯಾರ್ಥಿಗಳ ಮನವಿಯ ಬಗ್ಗೆ ಚರ್ಚೆ ನಡೆದು, ಸದರಿ ಮನವಿಯನ್ನು ಪರಿಗಣಿಸಿದಲ್ಲಿ ಸೀಟು ಹಂಚಿಕೆಯಲ್ಲಿ ವ್ಯತ್ಯಾಸವಾಗುವುದು ಹಾಗೂ ಮೆರಿಟ್ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವ ಸಾಧ್ಯತೆ ಇದೆ ಹಾಗೂ ಈಗಾಗಲೇ ಪ್ರಥಮ ಹಾಗೂ ದ್ವಿತೀಯ ಸುತ್ತಿನ ಪಿ.ಹೆಚ್.ಡಿ. ಕೌನ್ಸೆಲಿಂಗ್‌ನಲ್ಲಿ ಮೆರಿಟ್ ಅಧಾರದ ಮೇಲೆ ಸೀಟು ಹಂಚಿಕೆಯಾಗಿದೆ ಎಂದು ಕುಲಪತಿಗಳು ತಿಳಿಸಿದರು. ಚರ್ಚೆಯ ನಂತರ, ಸದರಿ ಮನವಿಯನ್ನು ಪರಿಗಣಿಸದಿರಲು ಸಿಂಡಿಕೇಟ್ ತೀರ್ಮಾನಿಸಿತು ಹಾಗೂ ಮೆರಿಟ್ ಆಧಾರದ ಮೇಲೆ ಮಾತ್ರ ಸೀಟು ಹಂಚಿಕೆ ಮಾಡಬೇಕೆಂದು ನಿರ್ಣಯಿಸಿತು.

iv). ಪ್ರೊ. ಮುನಿರಾಜಪ್ಪ, ಇತಿಹಾಸ ವಿಭಾಗ, ಇವರು ದಿನಾಂಕ: 31-07-2021ರಂದು ವಯೋನಿವೃತ್ತಿ ಹೊಂದಿದ್ದು, ನಿವೃತ್ತಿ ನಂತರ ಮಾರ್ಗದರ್ಶನ ನೀಡಲು ಪಿ.ಹೆಚ್.ಡಿ. ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ ಹಾಗೂ ಈ ಮೊದಲು ನಡೆದ ಪ್ರವೇಶ ಪ್ರಕ್ರಿಯೆ ಸುತ್ತುಗಳಲ್ಲಿ ಅವರಲ್ಲಿ ಖಾಲಿ ಇದ್ದ ಸೀಟುಗಳಿಗೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿಸಿಕೊಂಡಿರುವುದಿಲ್ಲವೆಂದು ಸಿಂಡಿಕೇಟ್ ಗಮನಕ್ಕೆ ತರಲಾಯಿತು.

v). ಶ್ರೀ ಎನ್ ಆಂಜಲಪ್ಪ ಅವರ ಖಾಯಮಾತಿ ವಿಷಯವನ್ನು ವಿಷಯ ಸೂಚಿ ಸಂಖ್ಯೆ: 50ರಲ್ಲಿ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿರುವುದನ್ನು ಸಿಂಡಿಕೇಟ್ ಗಮನಕ್ಕೆ ತರಲಾಯಿತು.

vi). ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಬಗ್ಗೆ ಸಮತಾ ಸೈನಿಕ ದಳದ ಅಧ್ಯಕ್ಷರು ಹಾಗೂ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಇವರುಗಳು ಸಲ್ಲಿಸಿದ ಮನವಿಯ ಕುರಿತು ಕುಲಪತಿಗಳು ಮಾತನಾಡಿ, 55 ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ವಿಶ್ವವಿದ್ಯಾಲಯ 21-3-2018ರಲ್ಲಿ ಅಧಿಸೂಚನೆ ಹೊರಡಿಸಿದ್ದು, 55 ಹುದ್ದೆಗಳ ಪೈಕಿ ಈಗಾಗಲೇ 35 ಹುದ್ದೆಗಳನ್ನು ಯು.ಜಿ.ಸಿ. ನಿಯಮಾವಳಿಗಳನುಸಾರ ಭರ್ತಿ ಮಾಡಲಾಗಿದೆ. ಉಳಿದ 20 ಹುದ್ದೆಗಳ ಪೈಕಿ 5 ಪ್ರಾಧ್ಯಾಪಕರು, 6 ಸಹ ಪ್ರಾಧ್ಯಾಪಕರು, 03 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ದಿನಾಂಕ: 14-06-2021ರಂದು ಅರ್ಜಿಗಳನ್ನು ಕರೆದಿದ್ದು, ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 31-07-2021ರಂದು ಕೊನೆಯ ದಿನಾಂಕವಾಗಿದ್ದು, ಕೆಲವೊಂದು ಹುದ್ದೆಗಳಿಗೆ ಇನ್ನೂ ಅರ್ಜಿ ಸಲ್ಲಿಕೆಯಾಗಿಲ್ಲದ ಕಾರಣ ಕೊನೆಯ ದಿನಾಂಕವನ್ನು 15-08-2021ರ ವರೆಗೆ ವಿಸ್ತರಿಸಲಾಗುವುದು. ಉಳಿದ 6 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಈ ಹಿಂದಿನ ಅಧಿಸೂಚನೆಯಂತೆಯೆ ಅರ್ಜಿ ಸಲ್ಲಿಕೆಯಾಗಿದ್ದು ಸಂದರ್ಶನ ಜರುಗಬೇಕಿದೆ ಹಾಗೂ ಕೆಲವು ಹುದ್ದೆಗಳಿಗೆ ಉಚ್ಚನ್ಯಾಯಾಲದ ಪ್ರಕರಣಗಳು ಬಾಕಿ ಇದೆ ಎಂದು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು. ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು, ಪತ್ರ ಸಂಖ್ಯೆ: ಸಕನಿ/ಮೀ.ಜಾ.ಕೋ-1/ಸಿಆರ್-87/2017-18 ದಿನಾಂಕ: 03-08-2021ರಲ್ಲಿ ಆಗಸ್ಟ್ 2021ರ ಒಳಗೆ ಬ್ಯಾಕ್‌ಲಾಗ್ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ವರದಿಯನ್ನು ನೀಡುವಂತೆಯೂ ಹಾಗೂ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಇಡಿ 7 ಯುಬಿವಿ 2020 ದಿನಾಂಕ: 03-08-2021ರಲ್ಲಿ ಅರ್ಹ ಅಭ್ಯರ್ಥಿಗಳ ಸಂದರ್ಶನ ನಡೆಸಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಕುರಿತಂತೆ

ಸಿಂಡಿಕೇಟ್ ಮುಂದೆ ಮಂಡಿಸಿ ನಿರ್ಣಯ ತೆಗೆದುಕೊಳ್ಳಬೇಕೆಂದು ನಿರ್ದೇಶನ ನೀಡಿದ್ದಾರೆ. ಈಗಾಗಲೇ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತಿಳಿಸಿರುವಂತೆ ಪ್ರಸ್ತುತ ಆಂಗ್ಲ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕವಾಗಿದ್ದ ಡಾ॥ ಚೈತ್ರ ನಾಗಮ್ಮನವರ್ ಅವರ ವಿರುದ್ಧ ಮತ್ತೊಬ್ಬ ಅಭ್ಯರ್ಥಿಯಾದ ಡಾ॥ ರಾಘವೇಂದ್ರ ಹೆಚ್.ಕೆ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ 4923/2020 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು 16-01-2021 ರ ತೀರ್ಪಿನಲ್ಲಿ ಕರ್ನಾಟಕ ಸರ್ಕಾರದ ಡಿ.ಪಿ.ಎ.ಆರ್. ಇಲಾಖೆಯಿಂದ ಹೊರಡಿಸಿರುವ 2001ರ ವಿಶೇಷ ನೇಮಕಾತಿ ನಿಯಮ ಉಪ ಪ್ರಕರಣ 6ರ ಪ್ರಕಾರ ಸಂದರ್ಶನ ನಡೆಸದೇ ಅರ್ಹ ಅಭ್ಯರ್ಥಿಗಳನ್ನು 29-40 ವರ್ಷಗಳ ವಯೋಮಿತಿ ಹಾಗೂ 18-28 ರ ವಯೋಮಿತಿ ಅನುಸಾರ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ನೇಮಕಾತಿ ಮಾಡಬೇಕೆಂದು ಆದೇಶಿಸಿದೆ. ಆದರೆ ಈ ಮೊದಲು ಯು.ಜಿ.ಸಿ. ನಿಯಮಾವಳಿಯನುಸಾರ ಆಯ್ಕೆ ಮಂಡಳಿಯು (Screening Committee/ Expert Committee) ಅಭ್ಯರ್ಥಿಗಳ ಸಂದರ್ಶನ ನಡೆಸಿ, ಸದರಿ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿದ ನಂತರ ನೇಮಕಾತಿ ಮಾಡಲಾಗಿದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶಕ್ಕೆ ಸರ್ವೋಚ್ಚ ನ್ಯಾಯಲಯವು ತಡೆಯಾಜ್ಞೆ ನೀಡಿದೆ. ಈಗಿರುವ ಪ್ರಶ್ನೆ, ಡಿ.ಪಿ.ಎ.ಆರ್. ಇಲಾಖೆಯಿಂದ ಹೊರಡಿಸಿರುವ 2001ರ ವಿಶೇಷ ನೇಮಕಾತಿ ನಿಯಮ 6ರ ಪ್ರಕಾರ ಸಂದರ್ಶನ ನಡೆಸದೇ ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಬೇಕೆ? ಅಥವಾ ಯು.ಜಿ.ಸಿ. ನಿಯಮಾವಳಿಯನುಸಾರ ಸಂದರ್ಶನ ನಡೆಸಿ ನೇಮಕಾತಿ ಮಾಡಬೇಕೆ? ಎಂಬುದಾಗಿದೆ. ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರ ಹುದ್ದೆಯ ಅಭ್ಯರ್ಥಿಗಳು ಯು.ಜಿ.ಸಿ. ನಿಗದಿಪಡಿಸಿರುವ ಕನಿಷ್ಠ ಎ.ಪಿ.ಐ. ಅಂಕಗಳನ್ನು ಹೊಂದಿರಬೇಕಾಗಿದ್ದು, ಇದನ್ನು ಖಚಿತಪಡಿಸಲು Expert Committee ಸಂದರ್ಶನದ ಅಗತ್ಯತೆ ಇರುತ್ತದೆ. ಆದಕಾರಣ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿನ ತನಕ ಕಾಯಬಹುದಾಗಿದೆ. ಪ್ರಸ್ತುತ ಸರ್ಕಾರದ ನಿರ್ದೇಶನವಿರುವುದರಿಂದ ಸಿಂಡಿಕೇಟ್ ಒಪ್ಪಿದರೆ, ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ಒಳಪಟ್ಟು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಮಾತ್ರ ಡಿ.ಪಿ.ಎ.ಆರ್. ವಿಶೇಷ ನಿಯಮಗಳನ್ನು ಅನುಸರಿಸಿ ಕರಡು ಮೆರಿಟ್ ಲಿಸ್ಟ್ ಅನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಿದ್ದಪಡಿಸಿ ಪ್ರಕಟಿಸಬಹುದಾಗಿದೆ ಹಾಗೂ ಸಂದರ್ಶನ ನಡೆಸದೇ ನೇಮಕಾತಿ ಮಾಡಬಹುದಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರದ ಡಿ.ಪಿ.ಎ.ಆರ್. ಇಲಾಖೆಯಿಂದ ಹೊರಡಿಸಿರುವ 2001ರ ವಿಶೇಷ ನಿಯಮದಲ್ಲಿ, ಸಂದರ್ಶನ ನಡೆಸಬಾರದು ಎಂಬುದರ ಬಗ್ಗೆ ಉಲ್ಲೇಖವಿರುವುದಿಲ್ಲ. ಯು.ಜಿ.ಸಿ. ನಿಯಮಾವಳಿ ಪ್ರಕಾರ ಸಂದರ್ಶನ ನಡೆಸಿ, ಡಿ.ಪಿ.ಎ.ಆರ್. ನಿಯಮಾವಳಿಯ ನಿಯಮ 6ರ ಪ್ರಕಾರ ಅರ್ಹ ಅಭ್ಯರ್ಥಿಗಳನ್ನು 29-40 ವರ್ಷಗಳ ವಯೋಮಿತಿ ಹಾಗೂ 18-28 ರ ವಯೋಮಿತಿ ಅನುಸಾರ ಪ್ರತ್ಯೇಕ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ, 29-40 ವರ್ಷಗಳ ವಯೋಮಿತಿಯಲ್ಲಿ ಅಭ್ಯರ್ಥಿಗಳಿದ್ದರೆ, ಆ ಪಟ್ಟಿಯಲ್ಲಿ ವಯಸ್ಸು ಮತ್ತು ಮೆರಿಟ್ ಅಧಾರದ ಮೇಲೆ ನೇಮಕಾತಿ ಮಾಡಬಹುದಾಗಿದೆ ಎಂದರು.

ಡಾ॥ ಗೋವಿಂದರಾಜು ಅವರು ಮಾತನಾಡಿ, ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಲ್ಲಿ ಸರ್ಕಾರದ ಡಿ.ಪಿ.ಎ.ಆರ್. ಇಲಾಖೆ 2001ರಲ್ಲಿ ಹೊರಡಿಸಿರುವ ಮಾರ್ಗಸೂಚಿಯನ್ನು ಪಾಲನೆ ಮಾಡಿ ಸಂದರ್ಶನವಿಲ್ಲದೆ, ಯು.ಜಿ.ಸಿ. ವಿದ್ಯಾರ್ಹತೆ ಹಾಗೂ ವಯಸ್ಸು ಮತ್ತು ಮೆರಿಟ್ ಅಧಾರದ ಮೇಲೆ

ನೇಮಕಾತಿ ಮಾಡಬಹುದಾಗಿದೆ ಎಂದು ತಿಳಿಸಿದರು. ಅವರು ಮುಂದುವರೆದು ಮಾತನಾಡಿ, ಸಂದರ್ಶನ ನಡೆಸಬೇಕೆ ಅಥವಾ ಬೇಡವೇ ಎಂಬುದರ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯತೆಗೆದುಕೊಳ್ಳುವುದು ಬೇಡವೆಂದು ತಿಳಿಸಿದರು. ಆದರೆ, ಬ್ಯಾಕ್‌ಲಾಗ್ ಹುದ್ದೆಗಳನ್ನು ನಿಯಮಾನುಸಾರ ಕೂಡಲೇ ಭರ್ತಿ ಮಾಡಬೇಕೆಂದು ಒತ್ತಾಯಿಸಿದರು.

*ನಿರ್ಣಯ:*

ಚರ್ಚೆಯ ನಂತರ, ಸರ್ಕಾರದ ನಿರ್ದೇಶನದ ಅನುಸಾರ ಬಾಕಿ ಇರುವ ಬ್ಯಾಕ್‌ಲಾಗ್. ಹುದ್ದೆಗಳನ್ನು ನಿಯಮಾನುಸಾರ ಶೀಘ್ರವೇ ಭರ್ತಿ ಮಾಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

ಕುಲಪತಿಗಳು, ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಅಡ್ವೊಕೇಟ್ ಜನರಲ್ ಅವರೊಂದಿಗೆ ಒಟ್ಟಿಗೆ ಸಭೆ ನಡೆಸಿ ಚರ್ಚಿಸಿ ಶೀಘ್ರವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

6. ಡಾ|| ಗೋವಿಂದರಾಜು ಅವರು, ಏಳು ಜನ ಸಿಂಡಿಕೇಟ್ ಸದಸ್ಯರು ಸಹಿ ಮಾಡಿರುವ ಪತ್ರವನ್ನು ಎಲ್ಲಾ ಸದಸ್ಯರುಗಳಿಗೆ ಸಲ್ಲಿಸಿ, ಪತ್ರಗಳಲ್ಲಿನ 14 ವಿಷಯಗಳ ಓದಿ ಈ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕೆಂದು ತಿಳಿಸಿದರು.

i). ಸಿಂಡಿಕೇಟಿನ ಸಭೆ ಮತ್ತು ಸಭೆಯ ನಡಾವಳಿಗಳು ವಸ್ತುನಿಷ್ಠವಾಗಿ ನಡೆಯದೆ ವ್ಯಕ್ತಿಗತವಾಗಿ ನಡೆಯುತ್ತದೆಂಬ ಆರೋಪದ ಕುರಿತು.

ಡಾ|| ಗೋವಿಂದರಾಜು ಅವರು ಮಾತನಾಡಿ, 156ನೇ ಮುಂದೂಡಲ್ಪಟ್ಟ ಸಿಂಡಿಕೇಟ್ ನಡಾವಳಿಯಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರನ್ನು ಮುದ್ರಿಸಿ ನಡಾವಳಿಯನ್ನು ಕಳುಹಿಸಿಕೊಡಬೇಕು, ಸಿಂಡಿಕೇಟ್ ಸಭೆಯ ಕಲಾಪಗಳನ್ನು ವಿಡಿಯೋಗ್ರಫಿ ಮಾಡಬೇಕು. ಕುಲಸಚಿವರು ನಡಾವಳಿಗಳಿಗೆ ಸಹಿ ಮಾಡಿರುವುದಿಲ್ಲ. ನಡಾವಳಿಗಳನ್ನು ಕುಲಸಚಿವರೇ ದಾಖಲಿಸಿ ಓದಿ ತಿಳಿಸಬೇಕು ಎಂದರು.

ಕುಲಸಚಿವರು ಮಾತನಾಡಿ, ಇದು ಶಾಸನಬದ್ಧ ಪ್ರಾಧಿಕಾರದ ಸಭೆಯಾದ್ದರಿಂದ, ವಿಡಿಯೋಗ್ರಫಿ ಮಾಡುವುದರಿಂದ ಇಲ್ಲಿ ನಡೆಯುವ ಕಲಾಪಗಳ ಗೌಪ್ಯತೆಗೆ ಕಾಪಾಡಲು ಸಾಧ್ಯವಿಲ್ಲವೆಂಬ ಭಾವಿಸಿರಬಹುದು. ವಿಡಿಯೋಗ್ರಫಿ ಮಾಡಿ ದಾಖಲೆಗಳ ಗೌಪ್ಯತೆಯನ್ನು ಕಾಪಾಡಬಹುದಾಗಿದೆ. ಈಗಾಗಲೇ ಹಿಂದಿನ ಸಭೆಯಲ್ಲಿ ಸ್ಪಷ್ಟಪಡಿಸಿರುವಂತೆ, ಕುಲಸಚಿವರು ಸದಸ್ಯ ಕಾರ್ಯದರ್ಶಿಯಾಗಿವುದರಿಂದ ನಡಾವಳಿಗಳನ್ನು ದಾಖಲಿಸಲು ಸಾಧ್ಯವಿರುವುದಿಲ್ಲ ಹಾಗೂ ನಡಾವಳಿಗಳಿಗೆ ಸಹಿ ಮಾಡಬೇಕೆಂದು ಪರಿನಿಯಮಾವಳಿಗಳಲ್ಲಿ ಎಲ್ಲೂ ಸ್ಪಷ್ಟಪಡಿಸಿಲ್ಲ. ವಿದ್ಯಾವಿಷಯಕ ಪರಿಷತ್ತಿನ ನಡಾವಳಿಗಳಿಗೆ ಕುಲಪತಿಗಳು ಮಾತ್ರ ಸಹಿ ಮಾಡಬೇಕು ಎಂದಿದೆ. ಅದೇ ನಿಯಮವನ್ನು ಇಲ್ಲೂ ಅಳವಡಿಸಿಕೊಳ್ಳಬಹುದು. ಪ್ರತ್ಯೇಕ ಸಿಬ್ಬಂದಿ ಸೇವೆಯನ್ನು ನೀಡಿದರೆ, ಸಿಂಡಿಕೇಟ್ ಸಭೆ ನಡಾವಳಿಗಳನ್ನು ಕುಲಸಚಿವರ ಕಛೇರಿಯಿಂದ ದಾಖಲಿಸಲು ಕ್ರಮ ಕೈಗೊಳ್ಳಲಾಗುವುದೆಂದರು.

ಡಾ|| ಎಸ್.ಬಿ. ಅಪ್ಪಾಜಿ ಗೌಡ, ಕಾಲೇಜು ಶಿಕ್ಷಣ ಇಲಾಖೆ, ಇವರು ಮಾತನಾಡಿ ಸಭೆಯಲ್ಲಿ ಮಂಡಿಸಿರುವ ಕಾರ್ಯಸೂಚಿಯ ಬಗ್ಗೆ ನಿರ್ಣಯ ತೆಗೆದುಕೊಂಡು, ನಿರ್ಣಯದ ಭಾಗವನ್ನು ಸ್ಕ್ರೀನ್ ಮೇಲೆ ಸದಸ್ಯರಿಗೆ ಪ್ರದರ್ಶಿಸಿ, ಸದಸ್ಯರು ತಿದ್ದುಪಡಿ ಇದ್ದರೆ ಅದನ್ನು ಸೇರ್ಪಡೆಗೊಳಿಸಬಹುದಾಗಿದೆ ಎಂದು ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ವಿಡಿಯೋಗ್ರಫಿ ಮಾಡಲಿಕ್ಕೆ ತೊಂದರೆ ಏನೆಂಬುದನ್ನು ಸ್ಪಷ್ಟಪಡಿಸಬೇಕೆಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್‌ಲಾಲ್ ಅವರು ಮಾತನಾಡಿ ಸಿಂಡಿಕೇಟ್ ನಡಾವಳಿಗಳನ್ನು ಹೊರಡಿಸಿದ ನಂತರ ಸದಸ್ಯರು ಸಲ್ಲಿಸುವ ಆಕ್ಷೇಪಣೆ/ತಿದ್ದುಪಡಿಗಳನ್ನು ಸೇರ್ಪಡೆಗೊಳಿಸಿ ನಂತರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಅವರು ಮುಂದುವರೆದು, ವಿಡಿಯೋಗ್ರಫಿ ಮಾಡಲಿಕ್ಕೆ ಅವಕಾಶವಿರುವುದಿಲ್ಲ, ಈ ಬಗ್ಗೆ ಅನುಮತಿ ಕೋರಿ ಪತ್ರ ಬರೆಯಲಾಗಿರುವುದನ್ನು ಈಗಾಗಲೇ ಸಭೆಯ ಗಮನಕ್ಕೆ ತರಲಾಗಿದೆ ಎಂದರು.

ಚರ್ಚೆಯ ನಂತರ, ಸಿಂಡಿಕೇಟ್ ಕಾರ್ಯಕಲಾಪಗಳನ್ನು ವಿಡಿಯೋ ರೆಕಾರ್ಡ್ ಮಾಡಬೇಕೆಂದು ಹಾಗೂ ಕುಲಸಚಿವರೇ ಸಿಬ್ಬಂದಿಗಳ ಸಹಾಯ ಪಡೆದು ನಡಾವಳಿಗಳನ್ನು ದಾಖಲಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

ಕುಲಪತಿಗಳು ಮಾತನಾಡಿ ವಿಡಿಯೋ ರೆಕಾರ್ಡಿಂಗ್ ಬಗ್ಗೆ ಮೇಲಾಧಿಕಾರಿಗಳ ಅನುಮತಿಯನ್ನು ಕೋರುವುದಾಗಿ ತಿಳಿಸಿದರು.

ii). ನ್ಯಾಕ್ ಗ್ರೇಡ್‌ಗೆ ಎಸ್.ಎಸ್.ಆರ್. ಸಲ್ಲಿಸಲು 3 ವರ್ಷ 2 ತಿಂಗಳಾವಧಿಯಲ್ಲಿ ಸಿದ್ಧತೆ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಗಮನ ನೀಡದ ಕುರಿತು.

ಕುಲಪತಿಗಳು ಮಾತನಾಡಿ, ನ್ಯಾಕ್ ಸಂಸ್ಥೆಯಿಂದ ವಿಶ್ವವಿದ್ಯಾಲಯದ ಮರು-ಮೌಲ್ಯಮಾಪನಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: IQAC/F-51/SSR-NAAC/2021-22 ದಿನಾಂಕ: 26-07-2021ರಂದು ಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು.

iii). ಪಿ.ಹೆಚ್.ಡಿ. ಕೋರ್ಸಿನ ಪ್ರವೇಶಾತಿ ಬಗ್ಗೆ ದಿನಾಂಕ: 06-06-2019ರಲ್ಲಿ ಅಧಿಸೂಚನೆ ಹೊರಡಿಸಿದ್ದು, ಇದುವರೆವಿಗೂ ಪಿ.ಹೆಚ್.ಡಿ. ಕೋರ್ಸಿಗೆ ಪ್ರವೇಶ ಮುಗಿಯದಿರುವ ಬಗ್ಗೆ.

ಕುಲಪತಿಗಳು ಪಿ.ಹೆಚ್.ಡಿ. ಕೋರ್ಸಿನ ಪ್ರವೇಶಾತಿಗೆ ಸಂಬಂಧಿಸಿದಂತೆ ಈಗಾಗಲೇ ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ 10-08-2021ರ ಒಳಗೆ ಪಿ.ಹೆಚ್.ಡಿ. ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಲು ತಿಳಿಸಿದರು.

iv). ಉಪ ಸಮಿತಿಗಳ ಸಭೆಯ ಕರೆಯದಿರುವುದು ಮತ್ತು ಸಭೆಯು ನಡೆಯಲು ಅವಕಾಶ ಕೊಡದಿರುವುದರ ಕುರಿತು.

ಡಾ॥ ಗೋವಿಂದರಾಜು ಅವರು ಮಾತನಾಡಿ, ಹಣಕಾಸು ಸಮಿತಿ, ಕಾಮಗಾರಿ ಸಮಿತಿ, ಕೇಂದ್ರ ಖರೀದಿ ಸಮಿತಿ ಹೊರತುಪಡಿಸಿ ಮಿಕ್ಕುಳಿದ ಯಾವುದೇ ಸಮಿತಿ ಸಭೆಗಳನ್ನು ಕರೆದಿರುವುದಿಲ್ಲ. ಪರಿಶಿಷ್ಟ ಜಾತಿ/ಪಂಗಡ ಕಲ್ಯಾಣ ಸಮಿತಿ ಸಭೆ ಕರೆದು ಒಂದುವರೆ ವರ್ಷವೇ ಆಗಿದೆ. ಆದರೆ, ಸದರಿ ಸಮಿತಿಗೆ ನನ್ನನ್ನು ಅಧ್ಯಕ್ಷನ್ನಾಗಿ ಮಾಡಿ ಪುನಃ ಬದಲಾಯಿಸಲಾಗಿದೆ ಎಂದು ತಿಳಿಸಿ ಈ ಬಗ್ಗೆ ಮಾಹಿತಿ ಬಯಸಿದರು.

ಕುಲಪತಿಗಳು ಮಾತನಾಡಿ, ಪರಿಶಿಷ್ಟ ಜಾತಿ/ಪಂಗಡ ಕಲ್ಯಾಣ ಸಮಿತಿ ಸಭೆಯನ್ನು ಕರೆಯಲು ಈಗಾಗಲೇ ಸೂಚನೆ ನೀಡಲಾಗಿದೆ. ಈ ಸಮಿತಿಯನ್ನು ಯು.ಜಿ.ಸಿ.

ಮಾರ್ಗಸೂಚಿಯನುಸಾರ ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಸ್ಟೆಲ್ ಸುಧಾರಣಾ ಸಮಿತಿಯ ಸಭೆಯನ್ನು ದಿನಾಂಕ: 07-08-2021ರಂದು ಕರೆಯಲಾಗಿದೆ. ಉಳಿದ ಸಮಿತಿಯ ಸಭೆಗಳನ್ನು ಕರೆಯಲು ಸಂಬಂಧಪಟ್ಟವರಿಗೆ ಸೂಚಿಸಲಾಗುವುದೆಂದರು.

v). ಬೆಂಗಳೂರು ವಿಶ್ವವಿದ್ಯಾಲಯದಡಿಯಲ್ಲಿ ಬರುವ ಅನುದಾನಿತ ಮತ್ತು ಸರ್ಕಾರಿ ಸಂಯೋಜಿತ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಲ್ಯಾಪ್-ಟಾಪ್ ನೀಡದಿರುವ ಕುರಿತು.

ಕುಲಪತಿಗಳು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

vi). ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ Work load ಇಲ್ಲದಿದ್ದರೂ ಸಹ 4 ಜನ ಅತಿಥಿ ಉಪನ್ಯಾಸಕರನ್ನು ಸಿಂಡಿಕೇಟ್ ಗಮನಕ್ಕೆ ತರದೇ ನೇಮಕಾತಿ ಮಾಡಿರುವ ಬಗ್ಗೆ.

ಈ ಬಗ್ಗೆ ಕುಲಸಚಿವರು ಉತ್ತರಿಸಿ, ಡೀನರು ಈಗಾಗಲೇ ಈ ಬಗ್ಗೆ ವಿವರಣೆ ಸಲ್ಲಿಸಿದ್ದು, ಸದಸ್ಯರಿಗೆ ಲಿಖಿತ ರೂಪದಲ್ಲಿ ಉತ್ತರವನ್ನು ಕಳುಹಿಸಿಕೊಡುವುದಾಗಿ ತಿಳಿಸಿದರು.

vii). ಕರ್ನಾಟಕ ವಿಶ್ವವಿದ್ಯಾಲಯದ ಕಾಯಿದೆ, ವಿಶ್ವವಿದ್ಯಾಲಯದ ಪರಿನಿಯಮಾವಳಿ, ರೆಗ್ಯುಲೇಷನ್ಸ್, ಸರ್ಕಾರದ ಆದೇಶಗಳು ಯು.ಜಿ.ಸಿ.ಯ ನಿಯಮಗಳು ಪರಿಪೂರ್ಣ ಪಾಲನೆ ಬಗ್ಗೆ.

ಯು.ಜಿ.ಸಿ. ಹಾಗೂ ಸರ್ಕಾರದ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಂಡಿರುವ ಬಗ್ಗೆ ಈಗಾಗಲೇ ಸಿಂಡಿಕೇಟ್ ಗಮನಕ್ಕೆ ತಂದಿರುವ ವಿಷಯವನ್ನು ಸದಸ್ಯರಿಗೆ ತಿಳಿಸಲಾಯಿತು.

viii). ಯು.ವಿ.ಸಿ.ಇ. ಕಾಲೇಜಿನ ಕಟ್ಟಡ ಕಾಮಗಾರಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತಿರುವ ಬಗ್ಗೆ.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ ಯು.ವಿ.ಸಿ.ಇ. ಕಟ್ಟಡ ಜೀರ್ಣೋದ್ಧಾರ / ಹೊಸ ಕಟ್ಟಡ ನಿರ್ಮಾಣಕ್ಕೆ ಬಂದಿರುವ ಸರ್ಕಾರದ ಅನುದಾನದ ಬಗ್ಗೆ ಮಾಹಿತಿ ಬಯಸಿದರು.

ಕುಲಪತಿಗಳು ಉತ್ತರಿಸಿ, ಯು.ವಿ.ಸಿ.ಇ. ಆವರಣದಲ್ಲಿನ ಪಾರಂಪರಿಕ ಕಟ್ಟಡಗಳ ಜೀರ್ಣೋದ್ಧಾರ/ಹೊಸ ಕಟ್ಟಡ ನಿರ್ಮಾಣ ಸಂಬಂಧ ಸರ್ಕಾರದಿಂದ ರೂ. 37.00 ಕೋಟಿ ಅನುದಾನ ಮಂಜೂರಾಗಿದೆಯೆಂದು ವಿವರಿಸಿ, ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಒಟ್ಟು 8000 ವಿದ್ಯಾರ್ಥಿಗಳ ಪೈಕಿ ಸುಮಾರು 4500 ವಿದ್ಯಾರ್ಥಿಗಳು ಯು.ವಿ.ಸಿ.ಇ. ವಿದ್ಯಾರ್ಥಿಗಳಾಗಿದ್ದಾರೆ.

ಶ್ರೀ ವಿದೇಯ ಬೆಳಗೋಡೆ ಅವರು ಮಾತನಾಡಿ, ಕೆ.ಆರ್.ಡಿ.ಎಲ್. ಸಂಸ್ಥೆ ಇನ್ನು ಮುಂದೆ ಯಾವುದೇ ಕಾಮಗಾರಿ ಕೆಲಸಗಳನ್ನು ವಹಿಸಬಾರದೆಂದು ತಿಳಿಸಿದರು.

ix). ಆರ್ಥಿಕ ಅಂಶಗಳ ಕ್ರಮಬದ್ಧತೆಯ ಬಗ್ಗೆ.

ಡಾ|| ಗೋವಿಂದರಾಜು ಅವರು ಮಾತನಾಡಿ, ಖಾಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರ ಮುದ್ರಣಕ್ಕೆ ಕರೆದಿದ್ದ ಟೆಂಡರ್ ಅನ್ನು ಪೂರ್ಣಗೊಳಿಸಲಾಗಿರುವುದಿಲ್ಲವೆಂದರು.

ಕುಲಪತಿಗಳು ಉತ್ತರಿಸಿ, National Academic Depositary ಯ ಡಿಜಿಲಾಕರ್ ವ್ಯವಸ್ಥೆಯಡಿಯಲ್ಲಿ ವಿದ್ಯಾರ್ಥಿಗಳು ಹಾಗೂ ಸಂಸ್ಥೆಗಳು ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಸುಲಭವಾಗಿ ಪರಿಶೀಲಿಸಬಹುದಾಗಿದೆ ಮತ್ತು ಸರ್ಕಾರ Unified University

Management System ಅನ್ನು ಜಾರಿಗೆ ತಂದು ವಿಶ್ವವಿದ್ಯಾಲಯದ ಎಲ್ಲ ಚಟುವಟಿಕೆಗಳು ಗಣಕೀಕೃತಗೊಳ್ಳುತ್ತಿದೆಯೆಂದು ತಿಳಿಸಿ, ಖಾಲಿ ಅಂಕಪಟ್ಟಿಗೆ ಎಂ.ಎಸ್.ಐ.ಎಲ್. ಸಂಸ್ಥೆ ಪ್ರತಿ ಅಂಕಪಟ್ಟಿಗೆ ನಮೂದಿಸಿರುವ ಟೆಂಡರ್ ದರ ರೂ.32/- ಅನ್ನು ಪ್ರಸ್ತುತ ದರಕ್ಕೆ ಹೋಲಿಸಿದಲ್ಲಿ ಹೆಚ್ಚಿನ ದರವಾಗಿದೆ ಎಂದು ತಿಳಿಸಿ, ಹೊಸದಾಗಿ ಟೆಂಡರ್ ಕರೆದು, non-tearable ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ಕ್ರಮಕೈಗೊಳ್ಳಲಾಗುವುದು ಎಂದರು.

x). ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ಗಳನ್ವಯ ಪರಿನಿಯಮಾವಳಿಗಳನ್ನು ರಚಿಸುವ ಕುರಿತು.

**ಮತ್ತು**

xi). ವಿಶ್ವವಿದ್ಯಾಲಯದ ಕೆಲವೊಂದು ವಿಭಾಗಗಳಿಗೆ ಪರಿನಿಯಮಾವಳಿಯನ್ನು ರಚಿಸಿಕೊಂಡಿರದ ಬಗ್ಗೆ.

ಕುಲಪತಿಗಳು ಉತ್ತರಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕಾರ ಪರಿನಿಯಮಾವಳಿಗಳನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದರು.

xii). ವಿಶ್ವವಿದ್ಯಾಲಯದ ಪ್ರತಿ ವಿಭಾಗದಲ್ಲಿ ಸ್ಮಾರ್ಟ್ ಕ್ಲಾಸ್ ರೂಂ ಮತ್ತು ಇಂಟರ್‌ನೆಟ್, ಕುಡಿಯುವ ನೀರು, ಗ್ರಂಥಾಲಯ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ.

ವಿಶ್ವವಿದ್ಯಾಲಯದ ವಿಭಾಗಗಳ ಬೋಧನಾ ಕೊಠಡಿಗಳನ್ನು ಸ್ಮಾರ್ಟ್ ಕ್ಲಾಸ್ ರೂಂ ಆಗಿ ಪರಿವರ್ತಿಸಲು ಸಧ್ಯದಲ್ಲೇ ಟೆಂಡರ್ ಕರೆಯಲಾಗುವುದು. ಹಾಗೂ ಲಾಂಗ್ವೇಜ್ ಲ್ಯಾಬ್ ಪ್ರಾರಂಭಿಸುವ ಬಗ್ಗೆ ಹಾಸ್ಟೆಲ್ ಸುಧಾರಣ ಸಮಿತಿಯಲ್ಲಿ ಚರ್ಚಿಸಲಾಗುವುದು ಎಂದು ಕುಲಪತಿಗಳು ತಿಳಿಸಿದರು.

xiii). Writ Appeal No.3779-219 Bangalore University ಹೋಗಿರುವ ಕೇಸು ಇಲ್ಲಿಯವರೆವಿಗೂ ಸಿಂಡಿಕೇಟ್ ಗಮನಕ್ಕೆ ತಂದಿರದ ಬಗ್ಗೆ.

ಮೇಲಾಧಿಕಾರಿಗಳ ಆದೇಶನುಸಾರ ಸೀನಿಯರ್ ಕೌನ್ಸೆಲ್ ಅನ್ನು ನೇಮಕಾತಿ ಮಾಡಲಾಗಿರುತ್ತದೆ ಎಂದು ಕುಲಪತಿಗಳು ಸಿಂಡಿಕೇಟ್ ಗಮನಕ್ಕೆ ತಂದರು.

xiv). ಕುಲಪತಿಗಳು ಏಕಮುಖ ನಿರ್ಧಾರ ತೆಗೆದುಕೊಳ್ಳುತ್ತಿರುವ ಬಗ್ಗೆ.

ಯಾವುದೇ ಏಕ ಮುಖ ನಿರ್ಧಾರವನ್ನು ತೆಗೆದುಕೊಳ್ಳಲಾಗಿರುವುದಿಲ್ಲವೆಂದು ಕುಲಪತಿಗಳು ಸ್ಪಷ್ಟಪಡಿಸಿದರು.

ಕುಲಪತಿಗಳು ಮಾತನಾಡಿ, ಇಂದಿನ ಸಭೆಯಲ್ಲಿ ಮಧ್ಯಾಹ್ನದ ಊಟದ ಸಮಯವನ್ನು ಹೊರತುಪಡಿಸಿ, ಬೆಳಿಗ್ಗೆ 11.30 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಇತರೆ ವಿಷಯಗಳ ಬಗ್ಗೆಯೇ ಚರ್ಚೆ ನಡೆದಿದೆ. ಏಳು ಜನ ಸಿಂಡಿಕೇಟ್ ಸದಸ್ಯರೆ ಸಭೆಯ ಹೆಚ್ಚಿನ ಸಮಯವನ್ನು ತೆಗೆದುಕೊಂಡಿದ್ದೀರಿ. ಸಭೆಯಲ್ಲಿ ಮಂಡತವಾಗಿರುವ ನಿಗದಿತ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಗಿಲ್ಲ. ಹಿಂದಿನ ಮೂರುರ್‍ನಾಲ್ಕು ಸಿಂಡಿಕೇಟ್ ಸಭೆಗಳಲ್ಲೂ ಸಹ ಸಾಕಷ್ಟು ಕಾರ್ಯಸೂಚಿಗಳನ್ನು ಚರ್ಚೆಗೆ ತೆಗೆದುಕೊಳ್ಳದೆ ಮುಂದೂಡಿದ್ದರಿಂದ, ನೌಕರರ ವೇತನ ಮುಂತಾದುವುಗಳ ಬಗ್ಗೆ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕಾದ್ದರಿಂದ ಮಂಡಿತವಾಗಿರುವ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಸಭೆಯನ್ನು ಕೋರಿದರು. ಇಲ್ಲದಿದ್ದರೆ, ತುರ್ತುವಿಷಯಗಳಿಗೆ ಸಂಬಂಧಿಸಿದ ಕಾರ್ಯಸೂಚಿಗಳನ್ನು ಪರಿಚಲನೆ ಮೂಲಕ (by circulation) ಸದಸ್ಯರ ಅನುಮೋದನೆಗೆ ಕಳುಹಿಸಿಕೊಡಲಾಗುವುದೆಂದರು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 1:** ದಿನಾಂಕ 12.10.2020 ರಂದು ಮಧ್ಯಾಹ್ನ 2.00 ಗಂಟೆಗೆ ಜರುಗಬೇಕಿದ್ದ 6ನೇ ಸೆಮಿಸ್ಟರ್ ಬಿ.ಕಾಂ 6.2 Principles and practice of Auditing ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ.

***ನಿರ್ಣಯ:***

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 2:** ಡಾ. ಜೆ.ಟಿ. ದೇವರಾಜು, ಪ್ರಾಧ್ಯಾಪಕರು, ಎಲೆಕ್ಟ್ರಾನಿಕ್ಸ್ ಸೈನ್ಸ್ ವಿಭಾಗ, ಇವರನ್ನು ಬೆಂಗಳೂರು ವಿಶ್ವವಿದ್ಯಾಲಯ, ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕಾತಿ ಮಾಡಿರುವುದರಿಂದ ವಿಶ್ವವಿದ್ಯಾಲಯದ ಸೇವಾ ಷರತ್ತುಗಳನ್ನು ಅನುಮೋದಿಸುವ ಬಗ್ಗೆ.

***ನಿರ್ಣಯ:***

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 3:** 2020-21 ನೇ ಸಾಲಿನಿಂದ ಕೆಲವು ಕಾಲೇಜುಗಳ ಸ್ವಯಂ ಮುಚ್ಚುವ ಮನವಿಯನ್ನು ಪರಿಗಣಿಸಿ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

***ನಿರ್ಣಯ:***

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**Item No. 4:** Discontinuation of MBA course at Indian Institute of Plantation Management Bengaluru and issue of No Objection Certificate-reg.

***Resolution:***

Deferred.

*Proceedings of the 159th meeting of the Syndicate held on 04.08.2021*

**Item No. 5:** Recovery of Inadmissible payment of Charge allowance of Rs. 2,31,865/- to Dr. Y. Narayana Chetty, Director of Sri. Allampalli Venkatram Chair on Labour Research, Department of Sociology, BUB-reg.

***Resolution:***

Deferred.

*Proceedings of the 159th meeting of the Syndicate held on 04.08.2021*

**Item No. 6** : Ratification for Deputation of Smt. Sujatha B.C. Associate Professor, Department of Electrical Engineering, UVCE, BUB to pursue Ph.D under Quality Improvement Programme.

***Resolution:***

Deferred.

*Proceedings of the 159th meeting of the Syndicate held on 04.08.2021*

**Item No.7:** Sanction of additional grants of Rs. 1,71,594/- to organize International Conference on Mathematics and its Applications (NCMA-2020) and National Science Day Celebration.

***Resolution:***

Deferred.

16/8/21

*Proceedings of the 159th meeting of the Syndicate held on 04.08.2021*

**Item No. 8:** To consider Institution of Endowment in the name of Sri (Late) M. Guruprasad for awards Cash Prize to a Student securing highest marks in M.Com PG. degree Course.

***Resolution:***

Deferred.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 9** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸೌಲಭ್ಯ ಮುಂದುವರಿಕೆಗೆ ಸಿಂಡಿಕೇಟ್ ಪ್ರಾಧಿಕಾರದ ಅನುಮೋದನೆ ಕೋರಿ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ: 10:** ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ಕಛೇರಿ ಮತ್ತು ಬೆಂಗಳೂರು ಪ್ರಾಂತೀಯ ಕಛೇರಿಯವರಿಗೆ ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಯುವಿಸಿಇ ಆವರಣಕ್ಕೆ ಹೊಂದಿಕೊಂಡಂತೆ ಮೆಟ್ರೋ ಸ್ಟೇಷನ್ ಪಕ್ಕದಲ್ಲಿ ನೀಡಿರುವ 300 X 300 ಚ.ಅಡಿ ಜಾಗವನ್ನು ವಾಪಸ್ಸು ಪಡೆಯುವ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 05-03-2018ರ ಸಿಂಡಿಕೇಟ್ ನಿರ್ಣಯವನ್ನು ಮಾರ್ಪಡಿಸಲು ಹಾಗೂ ಯುವಿಸಿಇ ಕಾಲೇಜಿಗೆ ಹೊಂದಿಕೊಂಡಿರುವ ಹಾಗೂ ಸರ್ಕಾರಿ ಕಲಾ ಕಾಲೇಜಿನ ಬಲ ಬದಿಯಲ್ಲಿ ಮೆಟ್ರೋ ಸಂಸ್ಥೆಗೆ ಹಂಚಿಕೆ ಮಾಡಿ ಉಳಿದಿರುವ ಜಮೀನಿನಲ್ಲಿ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ನೀಡಿದ್ದ 300 X 300 ಅಡಿ ಜಾಗವನ್ನು ವಾಪಸ್ಸು ಪಡೆಯಲು ಮತ್ತು ಸದರಿ ಜಾಗವು ಬೆಂಗಳೂರು ವಿಶ್ವವಿದ್ಯಾಲಯದ ಯುವಿಸಿಇ ಆವರಣಕ್ಕೆ ಒಳಪಟ್ಟಿರುವುದರಿಂದ, ಈ ಜಾಗವನ್ನು ಮೇಲ್ಕಂಡ ಇಲಾಖೆಗೆ ಮಂಜೂರು ಮಾಡಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ ಇಡಿ 31 ಯುಬಿವಿ 2018 ದಿನಾಂಕ: 11-03-2020ರನ್ನು ರದ್ದುಪಡಿಸಲು ಸರ್ಕಾರಕ್ಕೆ ಪತ್ರ ಕಳುಹಿಸಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ: 11:** ಬೆಂಗಳೂರು ವಿಶ್ವವಿದ್ಯಾಲಯ ಹಣಕಾಸು ವಿಭಾಗದಲ್ಲಿ ಆಂತರಿಕ ಆರ್ಥಿಕ ಸಲಹೆಗಾರರುಹಾಗೂ ಆಂತರಿಕ ಲೆಕ್ಕಪರಿಶೋಧಕರಾಗಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಬಿ. ಕುಮಾರಸ್ವಾಮಿ (ನಿವೃತ್ತ ಲೆಕ್ಕಾಧಿಕಾರಿ) ಇವರ ಸೇವೆಯನ್ನು ಮುಂದುವರೆಸುವ ಕುರಿತು ನೀಡಿದ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ಶ್ರೀ ಬಿ. ಕುಮಾರಸ್ವಾಮಿ (ನಿವೃತ್ತ ಲೆಕ್ಕಾಧಿಕಾರಿ) ಇವರ ಸೇವೆಯನ್ನು ದಿನಾಂಕ: 28-02-2020ರಿಂದ 27-02-2021ರ ವರೆಗೆ ವೇತನ ರೂ.27,000/-ಗಳಂತೆ ಮುಂದುವರೆಸಲಾಗಿದ್ದ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ ಇಎಸ್‌ಟಿ-1/ಇ1/OS/Internal/ Audit/Appt.2019-20 ದಿನಾಂಕ: 14-10-2020ನ್ನು ಸಿಂಡಿಕೇಟ್ ಅನುಸಮರ್ಥಿಸಿತು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಮೇಲ್ಕಂಡ ನೌಕರರ ಸೇವೆಯನ್ನು ಈಗಾಗಲೇ ಬಿಡುಗಡೆಗೊಳಿಸಿರುವುದರಿಂದ ಅವರ ಸ್ಥಾನದಲ್ಲಿ ಬದಲಿ ವ್ಯವಸ್ಥೆ ಮಾಡಲು ಕ್ರಮವಹಿಸಬೇಕೆಂದು ತಿಳಿಸಿದರು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ: 12:** ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕೋಶದಲ್ಲಿ ದಾಖಲಾದ ರಿಟ್ ಅರ್ಜಿಗಳನ್ನು ಪ್ಯಾನಲ್ ಆಫ್ ಅಡ್ವೋಕೇಟ್‌ಗಳಿಗೆ ವಹಿಸಿರುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ: 13:** ದಿವಂಗತ ಶ್ರೀ. ಕೇಶವಲು.ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರ ಶ್ರೀ ಶಶಿಕುಮಾರ್.ಕೆ ಅವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಶ್ರೀ ಗೋಪಿನಾಥ್ ಹಾಗೂ ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಮೃತ ನೌಕರರ ಕುಟುಂಬ ಸದಸ್ಯರ ವಿವರಗಳನ್ನು ಮತ್ತೊಮ್ಮೆ ಪರಿಶೀಲಿಸಿ ಹೆಚ್ಚಿನ ಮಾಹಿತಿ ಒದಗಿಸಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿರುವ ದಿವಂಗತ ಶ್ರೀ. ಕೇಶವಲು.ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರರಾದ ಶ್ರೀ ಶಶಿಕುಮಾರ್.ಕೆ ಅವರ ವಿದ್ಯಾರ್ಹತೆಯು ಎಸ್.ಎಸ್.ಎಲ್.ಸಿ. ಆಗಿರುವುದರಿಂದ ಗ್ರೂಪ್ 'ಡಿ' ಹುದ್ದೆಗೆ ನೇಮಕಾತಿಗೆ ಪರಿಗಣಿಸಬಹುದಾಗಿದೆ ಹಾಗೂ ಮೃತ ನೌಕರರ ಅವಲಂಬಿತರ ವಿವರಗಳನ್ನು ಪರಾಮರ್ಶಿತ ಟಿಪ್ಪಣಿಯಲ್ಲಿ ಒದಗಿಸಲಾಗಿದೆ ಎಂದು ತಿಳಿಸಿದರು.

ಡಾ॥ ಗೋವಿಂದರಾಜು ಹಾಗೂ ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ದಿವಂಗತ ಡಾ॥ ಶ್ರೀನಿವಾಸ್, ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಕಾಲೇಜು, ಅವರ ಪತ್ನಿ ಶ್ರೀಮತಿ. ಪ್ರಮೀಳಾ ಅವರು ಸಲ್ಲಿಸಿದ ಅನುಕಂಪದ ಆಧಾರಿತ ನೇಮಕಾತಿ ಅರ್ಜಿಯನ್ನು ಸಿಂಡಿಕೇಟ್ ಈಗಾಗಲೇ ಪರಿಗಣಿಸಿ ಗ್ರೂಪ್ 'ಸಿ' ಹುದ್ದೆಗೆ ನೇಮಕಾತಿ ಮಾಡಲು ಅನುಮೋದಿಸಿದ್ದರೂ ನೇಮಕಾತಿ ಆದೇಶ ಹೊರಡಿಸಿರುವುದಿಲ್ಲ. ಆದೇಶ ನೀಡಲು ಸಾಧ್ಯವಿಲ್ಲದಿದ್ದರೆ ಅವರಿಗೆ ಹಿಂಬರಹ ನೀಡಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಈ ಹಿಂದೆ ಅಗತ್ಯ ವಿದ್ಯಾರ್ಹತೆ ಇದ್ದರೂ ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡಿದ್ದ ಸಿಬ್ಬಂದಿಯನ್ನು ಗ್ರೂಪ್ 'ಸಿ' ಹುದ್ದೆಗೆ ಪರಿಗಣಿಸಿ ಆದೇಶ ಹೊರಡಿಸಲಾಗಿದೆ. ಸದರಿ ಆದೇಶವನ್ನು ರದ್ದುಪಡಿಸುವ ಕುರಿತು ಸರ್ಕಾರದಿಂದ ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 10ರ ಅಡಿಯಲ್ಲಿ ನೀಡಲಾದ ಸೂಚನಾ ಪತ್ರಕ್ಕೆ ಉತ್ತರ ಸಲ್ಲಿಸಲಾಗಿದೆ. ಸದರಿ ವಿಷಯ ಇತ್ಯರ್ಥವಾದ ಕೂಡಲೇ ಮೇಲ್ಕಂಡ ಅರ್ಜಿದಾರರಿಗೆ ಹಾಗೂ ಇತರರಿಗೆ ಆದೇಶ ಹೊರಡಿಸಲಾಗುವುದು. ಈ ಬಗ್ಗೆ ಸಂಬಂಧಪಟ್ಟವರಿಗೆ ಹಿಂಬರಹ ಕೂಡ ನೀಡಲಾಗುವುದು ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ದಿವಂಗತ ಶ್ರೀ. ಕೇಶವಲು.ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರ ಶ್ರೀ ಶಶಿಕುಮಾರ್.ಕೆ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಕುರಿತು, ಹೆಚ್ಚಿನ ವಿವರಗಳೊಂದಿಗೆ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

16/8/21

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ: 14:** ಕಿರಿಯ ನೌಕರರಿಗೆ ನೀಡಿರುವ ಸೇವಾ ಹಿರಿತನದ ಸೌಲಭ್ಯಗಳನ್ನು ನಿವೃತ್ತಿ ಅಂಚಿನಲ್ಲಿರುವ ಹಿರಿಯ ಎಂ.ಆರ್.ಇ ನೌಕರರಿಗೂ ನೀಡುವಂತೆ ದಿನಾಂಕ 10.08.2020 ರಂದು ನೀಡಿರುವ ಜಂಟಿ ಮನವಿ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ: 15:** ಶ್ರೀ ಭೀಮರಾವ್, ಶ್ರೀ ಕೆ. ಲಿಂಗರಾಜು ಮತ್ತು ಶ್ರೀ ಎಂ. ಕುಮಾರ, ಗ್ರೂಪ್ 'ಡಿ', ನೌಕರರಿಗೆ ಪ್ರಭಾರ ಭತ್ಯೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ: 16:** ಶ್ರೀ ಚೇತನ್.ಯು, ದಿವಂಗತ ಶ್ರೀ. ಉಮಾಶಂಕರ್.ಆರ್, ಕಿರಿಯ ಸಹಾಯಕರು, ಪಿ.ಜಿ ಹಾಸ್ಟೆಲ್-1, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 17:** ದಿನಾಂಕ 27.01.2020 ರಂದು ನಡೆದ ಇಲಾಖಾ ಪರೀಕ್ಷಾ ಫಲಿತಾಂಶದಲ್ಲಿ ಅನುತ್ತೀರ್ಣರಾದ ಸಿಬ್ಬಂದಿಗಳಿಗೆ ಕೃಪಾಂಕವನ್ನು ನೀಡುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 18:** ಅರ್ಥಶಾಸ್ತ್ರ ವಿಭಾಗದ 2017-19ನೇ ಸಾಲಿನ 4ನೇ ಸೆಮಿಸ್ಟರ್ ನ ಪ.ಜ-ಪ.ಪಂ ವಿದ್ಯಾರ್ಥಿಗಳು ಪ್ರಾಜೆಕ್ಟ್ ವರದಿಯ ಧನ ಸಹಾಯವನ್ನು ಕೋರಿರುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 19:** ಶ್ರೀಮತಿ ನಾಗರತ್ನ.ಎಂ, ದಿವಂಗತ ಶ್ರೀ ಚಾಮಪ್ಪ, ಗ್ರೂಪ್ 'ಡಿ' ರವಾನೆ ಮತ್ತು ಸ್ವೀಕಾರ ವಿಭಾಗ, ಇವರ ಪತ್ನಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 20:** ಶ್ರೀ ಎನ್. ಚಂದ್ರಶೇಖರ್, ಫ್ಲೋರ್‌ಮನ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿಭಾಗ, ಯು.ವಿ.ಸಿ.ಇ ಇವರಿಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 21:** ಶ್ರೀ ಕೇಶವರೆಡ್ಡಿ, ಗ್ರೂಪ್ 'ಡಿ' ಸಿಬ್ಬಂದಿ ವಿಭಾಗ–1 (ಸ್ಥಳ ನಿಯುಕ್ತಿ ನಿರೀಕ್ಷೆಯಲ್ಲಿರುವ) ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ಕ್ರಮವಹಿಸುವ ಹಾಗೂ ದಂಡನೆಯನ್ನು ವಿಧಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 22:** ಯು.ವಿ.ಸಿ.ಇ ಯಲ್ಲಿನ ವಿವಿಧ ವಿಭಾಗಗಳಲ್ಲಿ ಮೆಕ್ಯಾನಿಕ್ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಇನ್‌ಸ್ಟ್ರಕ್ಟರ್/ಫೋರ್‌ಮನ್ ಹುದ್ದೆಗೆ ಬಡ್ತಿ ನೀಡಲು ಇರುವ ವೃಂದ ಮತ್ತು ನೇಮಕಾತಿಗಳ ನಿಯಮಗಳನ್ನು ಪರಿಷ್ಕರಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 23:** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಿಕ್ಷಕರ ಸಂಘಕ್ಕೆ ಮಾನ್ಯತೆ ನೀಡುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 24:** ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು (ಸ್ವಾಯತ್ತ) ಇಲ್ಲಿನ ಸಂಶೋಧನಾ ಕೇಂದ್ರದ ರಸಾಯನಶಾಸ್ತ್ರಕ್ಕೆ ಪುರುಷ ವಿದ್ಯಾರ್ಥಿಗಳನ್ನು ಪ್ರವೇಶಾತಿ ಪಡೆಯುವ ಬಗ್ಗೆ.

ನಿರ್ಣಯ:

ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು (ಸ್ವಾಯತ್ತ) ಇಲ್ಲಿನ ರಸಾಯನಶಾಸ್ತ್ರ ವಿಭಾಗವನ್ನು ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ನೀಡಿರುವುದರಿಂದ ಅಲ್ಲಿನ ಸಂಶೋಧನಾ ಮಾರ್ಗದರ್ಶಕರು ಪುರುಷ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲು ಸಿಂಡಿಕೇಟ್ ಅನುಮತಿಸಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 25:** 2020–21ನೇ ಸಾಲಿಗೆ ಲಾರ್ವಿನ್ ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಬೆಂಗಳೂರು ಇದರ ಸಂಯೋಜನೆಯನ್ನು ಸ್ವಯಂ ಮುಚ್ಚುವ ಕಾರಣ ರದ್ದು ಪಡಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 26:** ಶ್ರೀ ರಾಕೇಶ್, ಪಿ.ಎಸ್ ದಿವಂಗತ ಶ್ರೀ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ–3 ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 27:** 2020–21ನೇ ಸಾಲಿನಿಂದ ಅಮಿತ ಬಿ.ಇಡಿ, ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 28:** ಶ್ರೀ ಮಲ್ಲಾರಾಧ್ಯ ಎಸ್. ಅಧೀಕ್ಷಕರು ಪರೀಕ್ಷಾ ವಿಭಾಗ, ಇವರ ಪತ್ನಿಯ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 29:** ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧಪಟ್ಟಂತೆ ಕರಡು ಪರಿನಿಯಮಾವಳಿಗಳನ್ನು ಅನುಮೋದಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**Item No. 30:** Approval of the Memorandum of Understanding between Bangalore University and the Environmental Management & Policy Research Institute (EMPRI), Bangalore reg.

***Resolution:***

After detailed discussion, the Syndicate resolved to approve the draft Memorandum of Understanding between Bangalore University and the Environmental Management & Policy Research Institute (EMPRI), Bangalore to undertake environmental impact assessment and other research projects for a period of 3 years without financial commitment on the part of the University.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 31:** ಶ್ರೀ ಮನೋಹರ ಜಿ.ಕೆ ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಈ ವಿದ್ಯಾರ್ಥಿಯು ವೈದ್ಯಕೀಯ ವೆಚ್ಚದ ಬಿಲ್ಲನ್ನು ಸಲ್ಲಿಸಿರುವ ದಿನಾಂಕ 17.01.2020

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 158th Adjourned meeting of the Syndicate held on 14.07.2021*

**Item No. 32:** Approval for introduction of B.Sc., (Hons.) Agricultural skill and Entrepreneurship programme at GPS Instituted of Agricultural Management under Section 66 (1) of KSU Act, 2000.

***Resolution:***

Deferred.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 33:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಪ್ರಸ್ತಾಪಿಸಿರುವ ಕಾಲೇಜುಗಳ ಸಂಯೋಜನೆಯ ಕುರಿತಂತೆ ಸಮಾನ ಕರಡು ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯ ವತಿಯಿಂದ ರೂಪಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 34:** ಶ್ರೀ ಜಯಕುಮಾರ್ ಜಿ. ರೆಡ್ಡಿ, ಪ್ರಾಧ್ಯಾಪಕರು ದೃಶ್ಯಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ವಾರ್ಷಿಕ ವೇತನ ಬಡ್ತಿ ಮತ್ತು 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕರಿಸಿ ಮೂಲವೇತನವನ್ನು ನಿಗಧಿಪಡಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 35:** ವಿಶ್ವವಿದ್ಯಾಲಯದ ಸಂಪತ್ತಿ ವಿಭಾಗಕ್ಕೆ ಸಮಾರಂಭಗಳಿಗೆ ಊಟೋಪಚಾರ ಮತ್ತು ಇತರೆ ಕಛೇರಿ ಕೆಲಸಗಳಿಗೆ ಸುಸಜ್ಜಿತವಾದ ಸೌಕರ್ಯದ ಸೌಲಭ್ಯವುಳ್ಳ ವಾಹನ ಖರೀದಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 36:** ದಿನಾಂಕ 16.02.2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಯ ಶಿಫಾರಸ್ಸಿನ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**Item No. 37:** Sanction of payment of professional fees for appearance of Sri. Madhusudhana R. Naik, Senior Advocate Counsel and Sri T.P Rajendra Kumar Sungay, University Advocate towards Writ appeal No. 3779-3780/2019 Bangalore University Vs. Dr. Sangamesh Patil and others.

***Resolution:***

After detailed discussion, the Syndicate resolved that the matter be placed along with the request of enhancement of honorarium and the report of the Syndicate Sub Committee constituted for empanelment of Advocates, before the next Syndicate meeting.

16/8/21

*Proceedings of the 159th meeting of the Syndicate held on 04.08.2021*

**Item No. 38:** Proceedings of the Campus Development Committee meeting held on 8th February 2021 and 2nd March 2021

***Resolution:***

Deferred.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 39:** ಸಾಯಿ ಆಫೀಸ್ ಸಪ್ಲೈಯರ್ಸ್‌ರವರನ್ನು ಕಪ್ಪು ಪಟ್ಟಿಗೆ ಸೇರಿಸುವ ಬಗ್ಗೆ.

***ನಿರ್ಣಯ:***

ವಿಷಯವನ್ನು ಮುಂದೂಡಲಾಯಿತು.

*Proceedings of the 159th meeting of the Syndicate held on 04.08.2021*

**Item No. 40:** Proceedings of the 59th Works Committee meeting held on 19th March 2021, in the Board Room, U.V.C.E, Bangalore University, Bengaluru

***Resolution:***

Deferred.

*Proceedings of the 158h Adjourned meeting of the Syndicate held on 14.07.2021*

**ವಿಷಯ ಸಂಖ್ಯೆ 41:** ಶ್ರೀ ಕೆ. ರಾಮಮೂರ್ತಿ, ಸಮನ್ವಯಾಧಿಕಾರಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರರವರ ಗುತ್ತಿಗೆ ಸೇವಾವಧಿಯನ್ನು ಮುಂದುವರೆಸುವ ಬಗ್ಗೆ.

ಕುಲಸಚಿವರು ಮಾತನಾಡಿ, ಮಂಜೂರಾದ ಹುದ್ದೆ ಇಲ್ಲದಿದ್ದರೂ ಶ್ರೀ ಕೆ. ರಾಮಮೂರ್ತಿ ಇವರನ್ನು ಗುತ್ತಿಗೆ ಆಧಾರದ ಮೇಲೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಸಮನ್ವಯಾಧಿಕಾರಿ ಎಂದು ನೇಮಕ ಮಾಡಿ ದಿನಾಂಕ: 15-06-2009ರ ಸಿಂಡಿಕೇಟ್ ನಿರ್ಣಯದನ್ವಯ ಪ್ರತಿ ವರ್ಷ ಒಂದು ದಿನ ಬಿಡುವು ನೀಡಿ ಮುಂದುವರೆಸುತ್ತಾ ಬರಲಾಗಿದೆ ಹಾಗೂ ಅವರಿಗೆ ಅಧೀಕ್ಷಕರ ಹುದ್ದೆಯ ಖಾಯಂ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿ ಹಾಗೂ ವಾರ್ಷಿಕ ವೇತನ ಬಡ್ತಿ ನೀಡಲಾಗಿರುವುದು ಹಾಗೂ ಸೇವಾ ಪುಸ್ತಕ ತೆರೆದಿರುವುದು ನಿಯಮ ಬಾಹಿರ ಕ್ರಮವಾಗಿರುತ್ತದೆ. ಅವರಿಗೆ ವೇತನ ಶ್ರೇಣಿ ಮತ್ತು ವಾರ್ಷಿಕ ವೇತನ ಬಡ್ತಿ ಕೊಡುವುದಕ್ಕೆ ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಅದರ ಬದಲಾಗಿ ಒಂದು ನಿಗದಿತ ಕ್ರೋಢೀಕೃತ ಮೊತ್ತವನ್ನು ನಿಗದಿಪಡಿಸಿ ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಹಿಂದಿನ ಸಾಲುಗಳಲ್ಲಿ ತೆಗೆದುಕೊಂಡಿರುವ ಕ್ರಮದಂತೆ ಅವರನ್ನು ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಕೆ. ರಾಮಮೂರ್ತಿ, ಸಮನ್ವಯಾಧಿಕಾರಿ (ತಾತ್ಕಾಲಿಕ), ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಅವರ ಸೇವಾವಧಿಯನ್ನು ಹಿಂದೆ ತೆಗೆದುಕೊಂಡ ಕ್ರಮದಂತೆ ದಿನಾಂಕ: 26.08.2020 ರಿಂದ ಒಂದು ವರ್ಷದವರೆಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

ಕುಲಸಚಿವರು ಮಾತನಾಡಿ, ಅವರಿಗೆ ವಾರ್ಷಿಕ ವೇತನ ಮುಂಬಡ್ತಿ ಹಾಗೂ ಖಾಯಂ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಯನ್ನು ನೀಡುವುದಾದಲ್ಲಿ ಅದಕ್ಕೆ ತಮ್ಮ ಅಸಮ್ಮತಿ ಇರುವುದಾಗಿ ತಿಳಿಸಿದರು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 42:** 56ನೇ ವಾರ್ಷಿಕ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 56ನೇ ವಾರ್ಷಿಕ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸಲು ಅನುವಾಗಲು ಕೆಳಕಂಡ ಗಣ್ಯರ ಹೆಸರುಗಳ ಪಟ್ಟಿಯನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗೆ ಕಳುಹಿಸಿಕೊಡಲು ಸಿಂಡಿಕೇಟ್ ಶಿಫಾರಸ್ಸು ಮಾಡಿತು.

1. ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು.
2. ಡಾ॥ ಎನ್. ಆರ್. ನಾರಾಯಣ ಮೂರ್ತಿ, ಸಂಸ್ಥಾಪಕರು, ಇನ್ಫೋಸಿಸ್.
3. ಡಾ॥ ಸುಧಾ ಮೂರ್ತಿ, ಅಧ್ಯಕ್ಷರು, ಇನ್ಫೋಸಿಸ್ ಫೌಂಡೇಷನ್.
4. ಜಸ್ಟೀಸ್ ಶಿವರಾಜ್ ವಿ ಪಾಟೀಲ್, ನಿವೃತ್ತ ನ್ಯಾಯಮೂರ್ತಿಗಳು, ಸರ್ವೋಚ್ಚ ನ್ಯಾಯಾಲಯ.
5. ಡಾ॥ ಅಜೀಮ್ ಪ್ರೇಮ್ ಜೀ, ಸಂಸ್ಥಾಪಕರು, ವಿಪ್ರೊ.
6. ಡಾ॥ ಕಿರಣ್ ಮಜೂಮ್‌ದಾರ್ ಷಾ, ಸಂಸ್ಥಾಪಕರು, ಬಯೋಕಾನ್

ಕುಲಪತಿಗಳು ಮುಂದುವರೆದು, ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ನೀಡುವ ಬಗ್ಗೆ ಸದಸ್ಯರುಗಳು ಹೆಸರುಗಳನ್ನು ಕಳುಹಿಕೊಡಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಘಟಿಕೋತ್ಸವ ಸಮಾರಂಭವನ್ನು ಆಯೋಜಿಸುವ ಸಂಬಂಧ ಒಂದು ಸಮಿತಿಯನ್ನು ರಚಿಸಬೇಕೆಂದು ಕೋರಿದರು.

ಚರ್ಚೆಯ ನಂತರ, ಎಲ್ಲಾ ನಿಕಾಯದ ಡೀನರು ಹಾಗೂ ಸಿಂಡಿಕೇಟ್ ಸದಸ್ಯರಾದ ಪ್ರೊ. ಟಿ.ವಿ. ರಾಜು ಅವರನ್ನೊಳಗೊಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 159th meeting of the Syndicate held on 04.08.2021*

**Item No. 43:** Appointment of Dr. C. Somashekar, Professor, Dept. of Sociology as Director of Sri Alampalli Venkatram Chair on Labour Research, BUB-reg.

***Resolution:***

After detailed discussion, the Syndicate resolved to appoint Dr. C. Somashekar, Professor, Dept. of Sociology as incharge Director of Sri Alampalli Venkatram Chair on Labour Research, Bangalore University, Bengaluru, in addition to his duties, with immediate effect and until further orders.

*Proceedings of the 159th meeting of the Syndicate held on 04.08.2021*

**Item No. 44:** Request of ISEC to sanction additional amount of Rs. 75,000/- every year mandatorily to conduct the selection examination and orientation Programme of SSTSS

***Resolution:***

Deferred.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 45:** 2021–22 ನೇ ಸಾಲಿನಿಂದ ಜೈನ್ ಕಾಲೇಜುಗಳ ಸ್ವಯಂ ಮುಚ್ಚುವ ಮನವಿಯನ್ನು ಪರಿಗಣಿಸಿ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

***ನಿರ್ಣಯ:***

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 46:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 21.01.2021 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ (ಬಿ.ಕಾಂ.) ಸಂಬಂಧಿಸಿದಂತೆ, ದಿನಾಂಕ: 21.01.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

ಪರಾಮರ್ಶಿತ ಟಿಪ್ಪಣಿಯಲ್ಲಿ ವಿಜ್ಞಾನ ನಿಕಾಯ ಇಂದು ನಮೂದಿಸಿರುವುದನ್ನು ವಾಣಿಜ್ಯ ನಿಕಾಯ ಎಂದು ಓದಿಕೊಳ್ಳತಕ್ಕದ್ದು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 47:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 21.01.2021 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ

**ನಿರ್ಣಯ:**

ಚರ್ಚೆಯ ನಂತರ, ವಿಜ್ಞಾನ ನಿಕಾಯಕ್ಕೆ ಸಂಬಂಧಿಸಿದಂತೆ (ಬಿ.ಎಸ್ಸಿ), ದಿನಾಂಕ: 21.01.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 48:** ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ವಿಭಾಗದಲ್ಲಿನ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಸನ್ನ ಎ.ಎಂ.ಆರ್ (ಗಣಕ ಯಂತ್ರ ಬೆರಳಚ್ಚು) ಇವರ ಸೇವೆಯನ್ನು ಮುಂದುವರೆಸುವ ವಿಷಯದ ಬಗ್ಗೆ.

ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಶ್ರೀ ಪ್ರಸನ್ನ ಎ.ಎಂ.ಆರ್ ಅವರನ್ನು ದಿನಗೂಲಿ ನೌಕರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು, ಹಿಂದಿನ ಕುಲಪತಿಗಳ ಅವಧಿಯಲ್ಲೇ ನಿರ್ಣಯ ತೆಗೆದುಕೊಳ್ಳಲಾಗಿದೆ. ಆದುದರಿಂದ ಅವರ ಸೇವೆಯನ್ನು ದಿನಗೂಲಿ ನೌಕರರ ಪಟ್ಟಿಯಲ್ಲಿ ಸೇರಿಸಬೇಕೆಂದು ಒತ್ತಾಯಿಸಿದರು.

ಕುಲಪತಿಗಳು ಉತ್ತರಿಸಿ, ಈ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿವರಗಳನ್ನು ಒದಗಿಸಲಾಗುವುದೆಂದು ತಿಳಿಸಿದರು.

16/8/21

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ವಿಭಾಗದಲ್ಲಿನ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಸನ್ನ ಎ.ಎಂ.ಆರ್ (ಗಣಕ ಯಂತ್ರ ಬೆರಳಚ್ಚು) ಇವರ ಸೇವೆಯನ್ನು ದಿನಾಂಕ:03-06-2021ರಿಂದ 02-06-2022ರ ಅವಧಿಗೆ ಪ್ರಸ್ತುತ ಇರುವ ಷರತ್ತು ಮತ್ತು ನಿಬಂಧನೆಗಳೊಪಟ್ಟು ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.



**ವಿಷಯ ಸಂಖ್ಯೆ 49:** ಡಾ॥ ವಿಜಯಕುಮಾರ್ ಹೆಚ್. ದೊಡ್ಡಮನಿ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಇವರಿಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಡಾ॥ ವಿಜಯಕುಮಾರ್ ಹೆಚ್. ದೊಡ್ಡಮನಿ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಇವರು ಆಕ್ಟೀವ್ ಗ್ಯಾಲಕ್ಸೀಸ್ ಕುರಿತು ಸಂಶೋಧನೆ ನಡೆಸಲು ವಿಶ್ವವಿದ್ಯಾಲಯ ಹೊರಡಿಸುವ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

ಮುಂದುವರೆದು, ಅವರು ಕೈಗೊಳ್ಳುವ ಸಂಶೋಧನಾ ಅಧ್ಯಯನದ ಬಗ್ಗೆ ನಿಗದಿತ ಅವಧಿಯೊಳಗೆ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.



**ವಿಷಯ ಸಂಖ್ಯೆ 50:** ಬೆಂಗಳೂರು ವಿಶ್ವವಿದ್ಯಾಲಯದ ದಿನಗೂಲಿ/ಮಾಸಿಕ ಕ್ರೋಢೀಕೃತ ವೇತನ ನೌಕರರ ಸೇವೆಯನ್ನು ಸಕ್ರಮಾತಿ ಮಾಡುವ ಬಗ್ಗೆ ಚರ್ಚಿಸುವ ಕುರಿತು 155ನೇ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಶ್ರೀ ಎನ್. ಆಂಜಲಪ್ಪ ಹಾಗೂ ಇತರರುಗಳ ಸಂಬಂಧಿಸಿದ ಕಡತವನ್ನು ಮಂಡಿಸುವ ಬಗ್ಗೆ.

ಶ್ರೀ ಎನ್ ಆಂಜಲಪ್ಪ, ದಿನಗೂಲಿ ನೌಕರರು ಇವರನ್ನು ಖಾಯಮಾತಿ ಮಾಡುವ ಬಗ್ಗೆ ಕುಲಪತಿಗಳು ಉತ್ತರಿಸಿ, ವಿಶ್ವವಿದ್ಯಾಲಯದ ಸಿಬ್ಬಂದಿ ವಿಭಾಗದಲ್ಲಿನ ಕಡತದಲ್ಲಿನ ದಾಖಲೆಗಳ ಪ್ರಕಾರ ದಿನಾಂಕ: 15-11-1996ರಲ್ಲಿ ಅವರನ್ನು ಕೋಲಾರ ಸ್ನಾತಕೋತ್ತರ ಕೇಂದ್ರಕ್ಕೆ ಸಂಚಿತ ವೇತನದ ಮೇಲೆ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ ಆದರೆ, ಅವರು ಪ್ರತಿಪಾದಿಸಿರುವ ರೀತಿಯಲ್ಲಿ ದಿನಾಂಕ: 15-01-1996ರಂದು ನೇಮಕವಾಗಿರುವ ಬಗ್ಗೆ ಮೂಲ ದಾಖಲೆಗಳು ಲಭ್ಯವಿರುವುದಿಲ್ಲ. ಈ ಬಗ್ಗೆ ಅವರು ಝೆರಾಕ್ಸ್ ಪ್ರತಿಯನ್ನು ಮನವಿಯೊಂದಿಗೆ ಸಲ್ಲಿಸಿದ್ದಾರೆ. ದಿನಗೂಲಿ ನೌಕರರ ಪಟ್ಟಿಯಲ್ಲಿ 9 ಜನ ಅವರಿಗಿಂತ ಮೊದಲೇ ನೇಮಕಾತಿ ಹೊಂದಿದವರಿದ್ದಾರೆ. ಆದ್ದರಿಂದ ಇವರನ್ನು ಖಾಯಂಗೊಳಿಸಲು ಕಷ್ಟಕರ. ಆದರೆ, ದಿನಗೂಲಿ ನೌಕರ ಪಟ್ಟಿಯಲ್ಲಿರುವ ಎಲ್ಲರಿಗೂ ಖಾಯಂ ನೌಕರರಿಗೆ ನೀಡುವಂತೆ 100% ಡಿ.ಎ. ಹಾಗೂ ಹೆಚ್.ಆರ್.ಎ. ನೀಡಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಮತ್ತು ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಶ್ರೀ ಎನ್ ಆಂಜಲಪ್ಪ ಅವರು ಕೋಲಾರ ಸ್ನಾತಕೋತ್ತರ ಕೇಂದ್ರದಲ್ಲಿ ದಿನಾಂಕ: 15-01-1996ರಿಂದ ಸಂಚಿತ ವೇತನ ಆಧಾರದ ಮೇಲೆ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸಿರುತ್ತಾರೆ. ಈ ಸಂಬಂಧ ಸ್ನಾತಕೋತ್ತರ ಕೇಂದ್ರದ ಆಗಿನ ನಿರ್ದೇಶಕರು ಶ್ರೀ ಆಂಜಲಪ್ಪ ಅವರು ದಿನಾಂಕ: 15-01-1996ರಿಂದ ಕೆಲಸ ನಿರ್ವಹಿಸಿರುವುದಕ್ಕೆ ಪ್ರಮಾಣ ಪತ್ರ ನೀಡಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 10-04-2006ರಂದು ಸಿವಿಲ್

ಅಪೀಲು ಸಂಖ್ಯೆ 3595–3612/1999ರಲ್ಲಿ ಕರ್ನಾಟಕ ಸರ್ಕಾರ ವಿರುದ್ಧ ಶ್ರೀಮತಿ ಉಮಾದೇವಿ ಮತ್ತು ಇತರ ಪ್ರಕರಣದಲ್ಲಿ ನೀಡಿರುವ ಆದೇಶದಂತೆ ಮೇಲ್ಕಂಡ ನೌಕರರು ನಾಲ್ಕೂ ಷರತ್ತುಗಳನ್ನು ಪೂರೈಸುತ್ತಾರೆ. ದಿನಾಂಕ: 06–08–2007 ಹಾಗೂ 03–09–2007ರಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಸರ್ಕಾರಕ್ಕೆ ಕಳುಹಿಸಿದ ಪಟ್ಟಿಯಲ್ಲಿ ಅವರ ನೇಮಕಾತಿ ದಿನಾಂಕವನ್ನು ತಪ್ಪಾಗಿ ನಮೂದಿಸಿ ಕಳುಹಿಸಿರುವುದರಿಂದ ಅವರಿಗೆ ಅನ್ಯಾಯವಾಗಿದೆ. ಇದೇ ರೀತಿ ದಿನಾಂಕ ತಪ್ಪಾಗಿ ನಮೂದಿಸಿ ಕಳುಹಿಸಿದ್ದ ಇತರ ಮೂರು ಸಿಬ್ಬಂದಿಗೆ ಈ ಹಿಂದೆ ಖಾಯಮಾತಿ ಮಾಡಿ ನ್ಯಾಯ ಒದಗಿಸಲಾಗಿದೆ. ಆದಕಾರಣ ಶ್ರೀ ಎನ್ ಆಂಜಲಪ್ಪ ಅವರನ್ನು ಸಹ ಖಾಯಮಾತಿ ಮಾಡುವ ಬಗ್ಗೆ ಸಿಂಡಿಕೇಟ್ ನಿರ್ಧಾರ ತೆಗೆದುಕೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಒತ್ತಾಯಿಸಿದರು. ಕುಲಪತಿಗಳು ಉತ್ತರಿಸಿ, ಈ ಹಿಂದೆ ಸರ್ಕಾರದ ಅನುಮೋದನೆ ಇಲ್ಲದೇ ಖಾಯಮಾತಿ ಮಾಡಿದ್ದರೆ ಅದು ತಪ್ಪು ಎಂದರು.

ಕುಲಸಚಿವರು ಮಾತನಾಡಿ, ದಾಖಲೆಗಳ ಆಧಾರದ ಮೇಲೆ ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಒದಗಿಸಿರುವ ದಾಖಲೆಗಳು ನೈಜವಾದದ್ದೇ ಇಲ್ಲವೇ ಎಂಬುದನ್ನು ಸಾಬೀತು ಪಡಿಸಬೇಕು. ದಾಖಲೆಗಳು ನೈಜವಾಗಿದ್ದರೆ ಈ ಪ್ರಕರಣವನ್ನು ನಿಯಮಾನುಸಾರ ಪರಿಗಣಿಸಬಹುದಾಗಿದೆ. ಆದಕಾರಣ, ಅವರು ನೀಡಿರುವ ಜೆರಾಕ್ಸ್ ಪ್ರತಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಸಲ್ಲಿಸಿದರೆ, ಅವುಗಳನ್ನು ಪರಿಶೀಲಿಸಿ ನೈಜವಾಗಿದ್ದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿದೆ. ಸರ್ಕಾರದ ನೀತಿ ನಿಯಮಗಳಿಗನುಸಾರವಾಗಿ ಸಿಂಡಿಕೇಟ್ ನಿರ್ಣಯಿಸಬೇಕಾಗುತ್ತದೆ ಎಂದು ತಿಳಿಸಿ, ಗ್ರೂಪ್ 'ಡಿ' ಇಂದ ಗ್ರೂಪ್ 'ಸಿ' ಹುದ್ದೆಗೆ ನೇಮಕಾತಿಯ ಬಗ್ಗೆ ಸರ್ಕಾರದ ನಿರ್ದೇಶನ ಬಂದಿದ್ದನ್ನು ಸಿಂಡಿಕೇಟ್ ಗಮನಕ್ಕೆ ತಂದರು.

ಶ್ರೀ ಉದಯ ಕುಮಾರ್ ಎಂ, ಮತ್ತೊಮ್ಮೆ ಮಾತನಾಡಿ, ಸದರಿ ನೌಕರರು ಇನ್ನು ಎರಡು ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿದ್ದಾರೆ. ಆದಕಾರಣ, ಶ್ರೀ ಎನ್ ಆಂಜಲಪ್ಪ ಅವರಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಹುಡುಕಲು ಹಾಗೂ ಮಾನವೀಯ ದೃಷ್ಟಿಯಿಂದ ಅವರ ದಾಖಲೆಗಳು ಸರಿಯಾಗಿದ್ದಲ್ಲಿ ಅವರನ್ನು ಖಾಯಮಾತಿ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಸಲ್ಲಿಸಬೇಕೆಂದು ತಿಳಿಸಿದರು.

*ನಿರ್ಣಯ:*

ಸುದೀರ್ಘ ಚರ್ಚೆಯ ನಂತರ, ಶ್ರೀ ಎನ್ ಆಂಜಲಪ್ಪ ಅವರು ದಿನಾಂಕ: 15–01–1996ರಲ್ಲಿ ಸಂಚಿತ ಕ್ರೋಢಿಕೃತ ಮಾಸಿಕ ವೇತನದಡಿ ದಿನಗೂಲಿ ನೌಕರರಾಗಿ ನೇಮಕಾತಿ ಹೊಂದಿರುವ ಬಗ್ಗೆ ಸಲ್ಲಿಸಿರುವ ದಾಖಲೆಗಳ ಮೂಲ ಪ್ರತಿಗಳು ಲಭ್ಯವಾದಲ್ಲಿ, ಅವುಗಳನ್ನು ಪರಿಶೀಲಿಸಿ, ಅವು ನೈಜವಾಗಿದ್ದಲ್ಲಿ ಹಾಗೂ ಅವರು ದಿನಗೂಲಿ ನೌಕರರ ಖಾಯಮಾತಿಯ ಬಗ್ಗೆ ಸರ್ಕಾರ ಹೊರಡಿಸಿದ್ದ ಷರತ್ತು ಹಾಗೂ ನಿಬಂಧನೆಗಳನ್ನು ಪೂರೈಸಿದ್ದಲ್ಲಿ, ಅವರನ್ನು ಖಾಯಮತಿ ಮಾಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಪಡೆದುಕೊಂಡು ನಂತರ ಆದೇಶ ನೀಡಲು ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು.



**ವಿಷಯ ಸಂಖ್ಯೆ 51:** ಅಭಿಮತದ ಆಯ್ಕೆ ಅನುಸಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡಿರುವ ಬೋಧಕರ ಮಾತ್ರ ವಿಶ್ವವಿದ್ಯಾಲಯಕ್ಕೆ ಮರು ವರ್ಗಾವಣೆ ಕೋರಿರುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 52:** ಪ್ರೊ. ರಾಮಚಂದ್ರಗೌಡ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇವರ ವರ್ಗಾವಣೆಗೆ ಅನುಮತಿಸಿರುವ ಆದೇಶವನ್ನು ಅನುಸಮರ್ಥಿಸುವ ಕುರಿತು.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 53:** ಬೆಂಗಳೂರು ವಿಶ್ವವಿದ್ಯಾಲಯದ 56ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 56ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿನಿಯಮಾವಳಿ 15.1ರಂತೆ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು. ಮುಂದುವರೆದು, ಸದರಿ ಪಟ್ಟಿಗಳಿಗೆ ತಿದ್ದುಪಡಿಗಳೇನಾದರೂ (Errata) ಇದ್ದರೆ, ಅವುಗಳನ್ನು ಸೇರಿಸಿಕೊಳ್ಳಲು ಕುಲಪತಿಯವರಿಗೆ ಅಧಿಕರಿಸಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 54:** ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ನವೀನ್‌ಕುಮಾರ್.ಕೆ ಇವರ ಪರೀಕ್ಷಾರ್ಥ ಅವಧಿಯನ್ನು "ತೃಪ್ತಿಕರ" ಎಂದು ಘೋಷಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 55:** ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ಅಮ್ಜದ್ ಖಾನ್ ಇವರ ಪರೀಕ್ಷಾರ್ಥ ಅವಧಿಯನ್ನು "ತೃಪ್ತಿಕರ" ಎಂದು ಘೋಷಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 56:** ವಿಶ್ವವಿದ್ಯಾಲಯದ ಶಿಕ್ಷಕ/ಶಿಕ್ಷಕೇತರ ನೌಕರರ ವೈದ್ಯಕೀಯ ವೆಚ್ಚ ಬಿಲ್ಲನ್ನು ಮರುಪಾವತಿ ಮಾಡುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Proceedings of the 159th meeting of the Syndicate held on 04.08.2021

**ವಿಷಯ ಸಂಖ್ಯೆ 57:** ಶ್ರೀ ಬೈರಪ್ಪ, ಫ್ಲೋರ್‌ಮೆನ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ ಇವರಿಗೆ ಎಐಸಿಟಿಇ ವೇತನ ಶ್ರೇಣಿ ಅಳವಡಿಸಿದ ನಂತರ ಮೂಲ ಪಿಂಚಣಿಯನ್ನು ಮರು ನಿಗದಿಪಡಿಸಿ ವ್ಯತ್ಯಾಸದ ಮೊತ್ತ ಪಾವತಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

**Item No.: 58:** Request to reconsider the decision of Syndicate regarding termination of lien period granted to Dr. Sharath Ananthamurthy, Professor, Department of Physics, Bangalore University, Bengaluru.

The Vice-Chancellor, briefed that, the Syndicate at its meeting held on 24-03-2021 has not considered the request of Dr. Sharath Ananthamurthy, Professor of Physics to rejoin the Bangalore University services and accordingly an endorsement was issued to him. Subsequently, the State Government has sought details about his lien period vide letter dated: 16-04-2021. A detailed reply was furnished to the Government on 05-05-2021. He has also sent a letter to the State Government by enclosing the representation of Dr. Sharath Ananthamurthy and discussed with the Government. The Vice-Chancellor further informed that the Government has suggested to place the matter before the Syndicate for reconsideration. He told that Dr. Sharath Ananthamurthy, is a good Researcher and Teacher. Hence, the agenda was placed before the Syndicate for its consideration.

The Registrar expressed that the two years lien period granted to Dr. Sharath Ananthamurthy was over and his new appointment as Professor at the School of Physics, University of Hyderabad has already been confirmed and now he is a permanent employee of the University of Hyderabad. Hence, his request cannot be considered.

***Resolution:***

After detailed discussion, the Syndicate resolved to consider favourably the request of Dr. Sharath Ananthamurthy, Professor (CAS), Department of Physics, Bangalore University, Bengaluru and to extend his lien period in order to enable him to join back the Department of Physics, Bangalore University.

The Registrar expressed her dissent for the above decision.

*Proceedings of the 159th meeting of the Syndicate held on 04.08.2021*

**Item No.: 59:** To ratify the action taken in approving the Panel of Examiners and Panels constituting Board of Examiners in the Faculty of Engineering for 2020-21 Exams (both UG & PG).

***Resolution:***

After detailed discussion, the syndicate resolved to ratify the action taken in approving the Panel of Examiners and Panels constituting Board of Examiners in the Faculty of Engineering for 2020-21 Exams (both UG & PG) as per Section 15(5) of the Karnataka State Universities Act, 2000.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 60:** ಐ.ಎ.ಎಸ್. ಮತ್ತು ಕೆ.ಎ.ಎಸ್. ಕೋಚಿಂಗ್ ಸೆಂಟರ್ ಅನ್ನು ಉನ್ನತೀಕರಿಸುವ ಕುರಿತು ರಚಿಸಲಾಗಿದ್ದ ಸಿಂಡಿಕೇಟ್ ಉಪಸಮಿತಿಯ ನಡಾವಳಿಗಳ ಬಗ್ಗೆ.

ಕುಲಪತಿಗಳು ಮಾತನಾಡಿ, ಐ.ಎ.ಎಸ್. ಮತ್ತು ಕೆ.ಎ.ಎಸ್. ಕೋಚಿಂಗ್ ಸೆಂಟರ್ ಅನ್ನು ಉನ್ನತೀಕರಿಸುವ ಕುರಿತು ರಚಿಸಲಾಗಿದ್ದ ಸಿಂಡಿಕೇಟ್ ಉಪಸಮಿತಿಯ ವರದಿಯಲ್ಲಿ ಹಣಕಾಸು ಅಂದಾಜು, ಕ್ರ.ಸಂ.11ರಲ್ಲಿ ಶಿಫಾರಸ್ಸು ಮಾಡಿರುವ ಸಂಭಾವನೆ ಅತ್ಯಧಿಕವಾಗಿದೆ. ಈ ಸಂಭಾವನೆ ನೀಡಲು ವಿಶ್ವವಿದ್ಯಾಲಯದ ಆಯ-ವ್ಯಯದಲ್ಲಿ ಅನುದಾನ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಹಣಕಾಸು ಅಂದಾಜಿನ ಲಭ್ಯತೆಗೆ ಒಳಪಟ್ಟು ಸದರಿ ಸಮಿತಿಯ ನಡಾವಳಿಯನ್ನು ಅನುಮೋದಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಐ.ಎ.ಎಸ್. ಮತ್ತು ಕೆ.ಎ.ಎಸ್. ಕೋಚಿಂಗ್ ಸೆಂಟರ್ ಅನ್ನು ಉನ್ನತೀಕರಿಸುವ ಕುರಿತು ರಚಿಸಲಾಗಿದ್ದ ಸಿಂಡಿಕೇಟ್ ಉಪಸಮಿತಿಯ ನಡಾವಳಿಗಳನ್ನು ಅನುಮೋದಿಸಿತು. ಮುಂದುವರೆದು, ಸಂಪನ್ಮೂಲ ವ್ಯಕ್ತಿಗಳಿಗೆ ಸಮಿತಿ ಶಿಫಾರಸ್ಸು ಮಾಡಿರುವ ಸಂಭಾವನೆ ನೀಡಲು ವಿಶ್ವವಿದ್ಯಾಲಯದ ಆಯ-ವ್ಯಯದ ಸಂಬಂಧಪಟ್ಟ ಶೀರ್ಷಿಕೆ ಅಡಿಯಲ್ಲಿ ಅನುದಾನ ಲಭ್ಯವಿಲ್ಲದಿದ್ದಲ್ಲಿ, ಪುನರ್-ವಿನಿಯೋಗದ ಮೂಲಕ ಅನುದಾನ ಒದಗಿಸಲು ಸಿಂಡಿಕೇಟ್ ಸೂಚಿಸಿತು.

*Proceedings of the 159th meeting of the Syndicate held on 04.08.2021*

**ವಿಷಯ ಸಂಖ್ಯೆ 61 :** ಎನ್.ಎ.ಐ.ಎಸ್.ಹೆಚ್. ಕಾಲೇಜಿನ ಹೊಸ ಕೋರ್ಸುಗಳ ಸಂಯೋಜನೆ ಬಗ್ಗೆ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸಿನ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರಿನ ಎನ್.ಎ.ಐ.ಎಸ್.ಹೆಚ್. ಕಾಲೇಜಿನ ವತಿಯಿಂದಬಿ.ಬಿ.ಎ. (ಏವಿಯೇಷನ್ ಮ್ಯಾನೇಜ್ಮೆಂಟ್) ಮತ್ತು ಬಿ.ಕಾಂ. (ಲಾಜಿಸ್ಟಿಕ್ಸ್ ಅಂಡ್ ಸಪ್ಲೈಚೈನ್ ಮ್ಯಾನೇಜ್ಮೆಂಟ್)ಕೋರ್ಸುಗಳನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಸಂಬಂಧ ಕಾಲೇಜಿನ ಪರಿವೀಕ್ಷಣೆಯನ್ನು ನಡೆಸಿದ್ದ ಡಾ॥ ಗೋವಿಂದರಾಜು, ಸಿಂಡಿಕೇಟ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯ ದಿನಾಂಕ: 04-02-2021ರ ವರದಿಯ ಅಬ್ಸರ್ವೇಷನ್ ಕಲಂನಲ್ಲಿ ಸದರಿ ಕೋರ್ಸುಗಳ ಸಂಯೋಜನೆಗೆ ಶಿಫಾರಸ್ಸು ಇರುವುದನ್ನು ಸಿಂಡಿಕೇಟ್ ಪರಿಗಣಿಸಿ, ಬಿ.ಬಿ.ಎ. (ಏವಿಯೇಷನ್ ಮ್ಯಾನೇಜ್ಮೆಂಟ್) ಮತ್ತು ಬಿ.ಕಾಂ. (ಲಾಜಿಸ್ಟಿಕ್ಸ್ ಅಂಡ್ ಸಪ್ಲೈಚೈನ್ ಮ್ಯಾನೇಜ್ಮೆಂಟ್) ಕೋರ್ಸುಗಳನ್ನು ತಲಾ ಒಂದು ವಿಭಾಗದೊಂದಿಗೆ ಪ್ರಾರಂಭಿಸಲು ಸಂಯೋಜನೆಯನ್ನು ನೀಡಲು ಶಿಫಾರಸ್ಸು ಮಾಡಿತು.

*Proceedings of the 159th meeting of the Syndicate held on 04.08.2021*

**ವಿಷಯ ಸೂಚಿ: 62** : 2020-2021ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನಾ ನವೀಕರಣ/ ಹೊಸ ಕಾಲೇಜು ಸಂಯೋಜನೆಯ. ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಗಳ ಅಧ್ಯಕ್ಷರು ಸಲ್ಲಿಸಿದ ವರದಿಗಳನ್ನು ಪರಿಗಣಿಸುವ ಬಗೆಗೆ.

**ನಿರ್ಣಯ:**

ಚರ್ಚೆಯ ನಂತರ, 2020-2021ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನಾ ನವೀಕರಣ/ ಹೊಸ ಕಾಲೇಜು ಸಂಯೋಜನೆಯ ನಿಮಿತ್ತ ನೇಮಕ ಮಾಡಿದ ಕೆಳಕಂಡ ಸ್ಥಳೀಯ ವಿಚಾರಣಾ ಸಮಿತಿಗಳ

ಅಧ್ಯಕ್ಷರು ಸಲ್ಲಿಸಿದ ವರದಿಗಳನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 59(9)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

| | | |
|---|---|---|
| **ಅ. ಡಾ॥ ಎಂ.ವಿ. ಆಶಾ, ಸಿಂಡಿಕೇಟ್ ಸದಸ್ಯರು, ಬೆಂ.ವಿ.ವಿ., ಬೆಂಗಳೂರು** | | |
| **ಕ್ರ.ಸಂ.** | **ಕಾಲೇಜು** | **ಶಿಫಾರಸ್ಸು (ಅಂಕಗಳು) ಕನಿಷ್ಠ ಅಂಕ: 40** |
| 1. | ಫುಲ್–ಇನ್ ಫಾಸ್ ಕಾಲೇಜು, ಬೆಂಗಳೂರು (ಸಂಯೋಜನಾ ನವೀಕರಣ) ವರದಿ ದಿ: 28–06–2021 | ಶಿಫಾರಸ್ಸು ಮಾಡಿದೆ (55.17) |
| **ಕ್ರ.ಸಂ.** | **ಕಾಲೇಜು** | **ಶಿಫಾರಸ್ಸು (ಅಂಕಗಳು) ಕನಿಷ್ಠ ಅಂಕ: 35** |
| 2. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಳಸ್ತ್ರೀನಗರ, ಟಿ. ದಾಸರಹಳ್ಳಿ, ಬೆಂಗಳೂರು (ಹೊಸ ಸಂಯೋಜನೆ) ವರದಿ ದಿ: 28–06–2021 | ಶಿಫಾರಸ್ಸು ಮಾಡಿದೆ (36.85) |
| **ಆ. ಶ್ರೀ ಜಯರಾಮು, ಸಿಂಡಿಕೇಟ್ ಸದಸ್ಯರು, ಬೆಂ.ವಿ.ವಿ., ಬೆಂಗಳೂರು** | | |
| **ಕ್ರ.ಸಂ.** | **ಕಾಲೇಜು** | **ಶಿಫಾರಸ್ಸು (ಅಂಕಗಳು) ಕನಿಷ್ಠ ಅಂಕ: 40** |
| 3. | ಪ್ರಿನ್ಸ್ ಕಾಲೇಜ್ ಆಫ್ ಎಜುಕೇಷನ್, ಹೆಚ್.ಡಿ. ಹಳ್ಳಿ, ಬೆಂಗಳೂರು (ಸಂಯೋಜನಾ ನವೀಕರಣ) ವರದಿ ದಿ: 28–06–2021 | ಶಿಫಾರಸ್ಸು ಮಾಡಿದೆ (63.75) |
| **ಇ. ಪ್ರೊ. ಟಿ.ವಿ. ರಾಜು, ಸಿಂಡಿಕೇಟ್ ಸದಸ್ಯರು, ಬೆಂ.ವಿ.ವಿ., ಬೆಂಗಳೂರು** | | |
| 4. | ಕಲಾನಿಕೇತನ್ ಕಾಲೇಜ್ ಆಫ್ ಎಜುಕೇಷನ್, ಎ.ಇ.ಸಿ.ಎಸ್. ಬಡಾವಣೆ, ಕೂಡ್ಲು ಹೊಸೂರು ರಸ್ತೆ, ಬೆಂಗಳೂರು, ವರದಿ ದಿ: 12–07–2021 (ರಿಟ್ ಅಪೀಲು ಸಂಖ್ಯೆ: 576/2020ರಲ್ಲಿ ಘನ ಉಚ್ಚನ್ಯಾಯಾಲಯದ ಆದೇಶ ದಿನಾಂಕ: 18–02–2021) | ಶಿಫಾರಸ್ಸು ಮಾಡಿದೆ (56.43) |



**ವಿಷಯ ಸೂಚಿ:63:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಕಛೇರಿ/ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ/ಮಾಸಿಕ ಕ್ರೋಢೀಕೃತ ವೇತನದ ತಾತ್ಕಾಲಿಕ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:**

ಶ್ರೀ ಪ್ರೇಮ್ ಸೋಹನ್ ಲಾಲ್ ಹಾಗೂ ಡಾ॥ ಗೋವಿಂದರಾಜು ಅವರು ಮಾತನಾಡಿ, ಯು.ವಿ.ಸಿ.ಇ. ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಲವರಿಗೆ ವೇತನ ಶ್ರೇಣಿ ನಿಗದಿಪಡಿಸಿರುವಂತೆ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸುಮಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಡಾ॥ ಅರುಣಾಚಲಪತಿ ಹೆಚ್.ವಿ. ಮತ್ತು ಶ್ರೀಮತಿ ರಜನಿ ಇವರಿಗೆ ಅಗತ್ಯ ವಿದ್ಯಾರ್ಹತೆ ಇರುವುದರಿಂದ ಸಹಾಯಕ ಗ್ರಂಥಪಾಲಕರಿಗೆ ಅನ್ವಯವಾಗುವ ವೇತನವನ್ನು ನಿಗದಿಪಡಿಸಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, ಶ್ರೀ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚನ್ಯಾಯಾಲಯದ ಆದೇಶದನುಸಾರ ದಿನಗೂಲಿ ನೌಕರರನ್ನು ನೇಮಕ ಮಾಡಬಾರದೆಂಬ ಸರ್ಕಾರದ ಸ್ಪಷ್ಟ ನಿರ್ದೇಶನವಿದ್ದರೂ 79 ಜನರನ್ನು ದಿನಗೂಲಿ ನೌಕರರೆಂದು ನೇಮಕ ಮಾಡಿಕೊಳ್ಳಲಾಗಿದೆ ಹಾಗೂ ಸದರಿ ಪಟ್ಟಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಕೆಲವರನ್ನು ಸೇರಿಸಲಾಗಿದೆ ಹಾಗೂ ಖಾಯಂ ನೌಕರರಿಗೆ ಅನ್ವಯವಾಗುವ ಡಿ.ಎ. ಮತ್ತು ಹೆಚ್.ಆರ್.ಎ.ದಲ್ಲಿ ಶೇಕಡಾ 75ರಷ್ಟನ್ನು ಸದರಿ ನೌಕರರಿಗೆ ಮಂಜೂರು ಮಾಡಲಾಗಿರುವುದು ಸರಿಯಾದ ಕ್ರಮವಲ್ಲ. ನಿಯಮಾನುಸಾರ ವೇತನ ನಿಗದಿಪಡಿಸಬೇಕಾಗಿತ್ತು ಎಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಕೆ.ಆರ್. ಸರ್ಕಲ್‌ನ ಯು.ವಿ.ಸಿ.ಇ. ನಿರ್ವಹಿಸುತ್ತಿರುವ ಕೆಲವು ಸಿಬ್ಬಂದಿಗಳ ಬಗ್ಗೆ ಮಾಹಿತಿ ಕೋರಿದರು.

ಕುಲಪತಿಗಳು ಉತ್ತರಿಸಿ, ಸದಸ್ಯರು ಕೋರಿರುವ ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದು. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸೇವಾ ಅವಧಿಯು ಮೇ 2021ಕ್ಕೆ ಕೊನೆಗೊಂಡಿರುವುದರಿಂದ, ಹಿಂದಿನ ಬಾರಿ ನಡೆದುಕೊಂಡು ಬಂದಂತೆ ಅವರನ್ನು ಒಂದು ವರ್ಷದ ಅವಧಿಗೆ ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಕಛೇರಿ/ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು **(79+6+9)** ದಿನಗೂಲಿ/ಮಾಸಿಕ ಕ್ರೋಢೀಕೃತ ವೇತನದ ತಾತ್ಕಾಲಿಕ ನೌಕರರ ಸೇವೆಯನ್ನು ಎರಡು ದಿನಗಳ ಕಾರ್ಯ ನಿರತ ಅವಧಿಯ ಬಿಡುವು ನೀಡಿ ದಿನಾಂಕ: 05-06-2021ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಪ್ರಸ್ತುತ ಇರುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮುಂದುವರೆಸಲು ಸಿಂಡಿಕೇಟ್ ನಿರ್ಣಯಿಸಿತು.

**GENERAL DISCUSSION:-**

1. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಕೌಶಲಾಭಿವೃದ್ಧಿ ಕೇಂದ್ರ (Skill Development Centre) ಸ್ಥಾಪಿಸುವ ಕುರಿತು ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಬೇಕು. Lanaguage Lab ಸ್ಥಾಪಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರು ರಾಜೀನಾಮೆ ನೀಡಿದ್ದು ಅವರ ಸ್ಥಾನದಲ್ಲಿ ಬೇರೊಬ್ಬರನ್ನು ನೇಮಕ ಮಾಡಬೇಕೆಂದು ಕೋರಿದರು.

ಕುಲಪತಿಗಳು ಉತ್ತರಿಸಿ ಕೌಶಲಾಭಿವೃದ್ಧಿ ಕೇಂದ್ರ ಸ್ಥಾಪಿಸುವ ಕುರಿತು ಮುಂದಿನ ಸಿಂಡಿಕೇಟ್ ಮುಂದಿನ ಸಿಂಡಿಕೇಟ್ ಸಭೆಗೆ ಟಿಪ್ಪಣಿ ಮಂಡಿಸಲಾಗುವುದು. Lanaguage Lab ಪ್ರಾರಂಭಿಸುವ ಬಗ್ಗೆ ಹಾಸ್ಟೆಲ್ ಸುಧಾರಣಾ ಸಮಿತಿಯಲ್ಲಿ ಚರ್ಚಿಸಲಾಗುವುದು ಎಂದರು. ಮುಂದುವರೆದು, ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರು ನೀಡಿರುವ ರಾಜೀನಾಮೆಯನ್ನು ಇನ್ನೂ ಅಂಗೀಕರಿಸಿರುವುದಿಲ್ಲ. ನೂತನ ಕಾನೂನು ಸಲಹೆಗಾರರು ನೇಮಕಾತಿ ಆಗುವವರೆಗೆ ಅವರನ್ನು ಮುಂದುವರೆಸಬಹುದು ಹಾಗೂ ಕಾನೂನು ಸಲಹೆಗಾರರ ನೇಮಕಾತಿ ಬಗ್ಗೆ ಉಚ್ಚನ್ಯಾಯಾಲಯದ ರಿಜಿಸ್ಟ್ರಾರ್‌ರಿಂದ ಪಟ್ಟಿ ಪಡೆದು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಪತಿಯವರು

16/8/21